ಜನಪದ ವಿಚಾರ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೯ ಜುಲೈ-೨೦೦೯ ಸಂಚಿಕೆ-೧೨



ಶಿಕ್ಷಣದ ಖಾಸಗೀಕರಣ

ಎಲ್ಲಿದೆ ಶಿಕ್ಷಣದ ಹೂರಣ?

ಜನಪದ ವಿಚಾರದಲ್ಲಿ

ಜುಲೈ–2009

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಜುಲೈ - ೨೦೦೯
ಸಂಪುಟ - ೯
ಸಂಚಿಕೆ -೧೨

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

☎08236 316344

e-mail : janapada@yahoo.com
web: janapada.net

ಬೆಂಕಿ

ಪಂಜಾಬವೇನು ಶ್ರೀಲಂಕೆಯೇನು
ರುಮಾನಿಯಾವೇನು ಕಾಶ್ಮೀರವೇನು
ಪೆಲಸ್ತಾನಿಯಾವೇನು ಪನಾಮವೇನು
ಹೊತ್ತಿಕೊಂಡಿದೆ ಬೆಂಕಿ
ಸುಡುಸುಡುತ್ತಿದೆ ಸೊಕ್ಕಿ
ಆಹುತಿಯಾಗುತ್ತಿದ್ದಾರೆ ಪಿಕಾಸೊ.
ತಾನಸೇನ ಗೆಲಿಲಿಯೊ ಅಶೋಕ
ಅಕಬರ ಕಬೀರ ಕ್ರಿಸ್ತ ಪೈಗಂಬರ
ಬುದ್ಧ ಹೃದಯಸಾರ

ಹೇಳಿ ಪುರೋಹಿತರೆ ಮಠಾಧಿಪತಿಗಳೆ
ಬಿಶಪ್ಪರೆ ಮುಲ್ಲಾಗಳೆ
ಹೇಳಿ ತಕ್ಕಡಿಯವರೆ
ಕೊಳ್ಳಿ ಇಟ್ಟವರಾರು?
ಪುಂಡು ಪೋಕರಿ ಪುಢಾರಿ ರಾಜಕಾರಣಿಗಳೆ
ಮೀನು ಹಿಡಿಯಲು ಹೋಗಿ ಕೆರೆಗೇ
ವಿಷ ಇಕ್ಕಿದವರೆ
ಹೇಳಿ ಬೆಂಕಿ ಇಟ್ಟವರಾರು?

ಮತ್ತೆ ಮತ್ತೆ ಕಟ್ಟುತ್ತಲೇ ಹೋಗುವುದು
ಯುಗಯುಗದ ಕಥೆಯೆ
ಅಥವಾ ಸದಾ ಹೊರಬೇಕಾದ ವ್ಯಥೆಯೆ?

ಇದೇನು ಗಾಳಿಮಾತಲ್ಲ
ಹಾದಿಬೀದಿಗಳಲ್ಲಿ ಹೊಲಗದ್ದೆಗಳಲ್ಲಿ
ಕಾರಖಾನೆಗಳಲ್ಲಿ ಜನ
ಆದೇಶಿಸುತ್ತಾರೆ ಮುಷ್ಟಿಬಿಗಿದು;
ಹೇಳಿ ಇದಕ್ಕೆ ಉತ್ತರ
ಬೆಂಕಿ ಇಟ್ಟವರಾರು?
ಮನುಷ್ಯತ್ವವ ಸುಟ್ಟವರಾರು?

- ಆರ್.ವಿ.ಭಂಡಾರಿ

ವಿಚಾರ ದೀಪ್ತಿ

ಮಾನವ ಸಂಪನ್ಮೂಲ ಶಬ್ದದ ಅಪಾರ್ಥ

ನೆಲ, ಜಲ, ಖನಿಜ, ಇಂಧನ ಮೂಲಗಳಂತೆ ಮಾನವ ಜೀವಿಗಳೂ ಸಹ ಸಂಪನ್ಮೂಲಗಳೆಂಬ ಭಾವನೆಯೇ 'ಮಾನವ ಸಂಪನ್ಮೂಲಾಭಿವೃದ್ಧಿ' ಎನ್ನುವ ಪರಿಕಲ್ಪನೆಗೆ ಆಧಾರವಾಗಿದೆ. ಉಳಿದೆಲ್ಲ ಸಂಪನ್ಮೂಲಗಳನ್ನು ಗರಿಷ್ಠ ಶಕ್ತಿ ಉತ್ಪಾದನೆಗಳಿಸಲು ದುಡಿಸಿಕೊಳ್ಳುವಂತೆ ಇದನ್ನೂ ಉಪಯೋಗಿಸಬೇಕೆಂಬುದು ಅದರ ಉದ್ದೇಶ. ನಿವ್ವಳ ರಾಷ್ಟ್ರೀಯ ಉತ್ಪನ್ನ ಅದರಿಂದ ಬಹಳ ವೃದ್ಧಿಯಾಗಬೇಕೆಂಬುದು ಗುರಿ. ಇಂಥ ಲೆಕ್ಕಾಚಾರದಲ್ಲಿ ಸದ್ಗುಣ, ಸದಾಚಾರ, ನಂಬಿಕೆ, ವಿಶ್ವಾಸ, ಸೌಂದರ್ಯ ಎಂದು ಮುಂತಾದ ಅಳತೆಗೆ ಸಿಕ್ಕದಂಥ, ಅಲೌಕಿಕ ಬದುಕಿನ ಮೌಲ್ಯಗಳು ಗಣನೆಗೆ ಬಾರದೆ ಹೋಗುತ್ತವೆ. ಸಂಪನ್ಮೂಲಗಳು ಬಳಕೆದಾರರಿಗೆ ಒದಗುವ ಸಾಧನಗಳು. ಸತತ ಬಳಕೆಗೆ ಒದಗಿಬರುವಂಥ ಆಕರ ಅದು. ಪ್ರತ್ಯುತ್ಪನ್ನಮತಿ ಎಂಬ ಶಬ್ದವನ್ನು ಸಮಯಕ್ಕೆ ತಕ್ಕ ಉಪಾಯಗಳನ್ನು ಕಂಡುಹಿಡಿಯಬಲ್ಲ ವ್ಯಕ್ತಿಗೂ ಅನ್ವಯಿಸುತ್ತೇವೆ.

ಎಚ್.ಆರ್.ಡಿ.ಪರಿಕಲ್ಪನೆಯು ವ್ಯಕ್ತಿಗಳನ್ನೂ ರಾಷ್ಟ್ರಗಳನ್ನೂ ಹೆಚ್ಚು ಸಶಕ್ತಗೊಳಿಸಿ ಹೆಚ್ಚು ಉತ್ಪನ್ನಕಾರಕವಾಗಿಸುತ್ತವೆ ಎಂದು ಒಪ್ಪಿಕೊಳ್ಳೋಣ. ಅದರಿಂದ ಹೆಚ್ಚು ಹೆಚ್ಚು ವಸ್ತುಗಳು ಉತ್ಪನ್ನವಾಗಿ, ಹೆಚ್ಚು ಸೇವೆ ಸಲ್ಲಿಕೆಯಾಗಿ ಮಾನವ ಸುಖಸಂತೋಷಗಳು ಸಮೃದ್ಧಗೊಳ್ಳುತ್ತವೆ ಎನ್ನೋಣ. ಆದರೆ ಒಂದು ಮಿತಿಯನ್ನು ದಾಟಿದ ಮೇಲೆ ಹೆಚ್ಚು ಹೆಚ್ಚಿನ ಉತ್ಪಾದನೆಗಳಿಂದ ಹೆಚ್ಚು ಹೆಚ್ಚು ಸಂತೃಪ್ತಿ ದೊರೆಯುತ್ತದೆಂಬುದು ಸುಳ್ಳು ಎಂದು ನಮ್ಮ ಬದುಕು ತೋರಿಸಿಕೊಡುತ್ತದೆ.

ಕೆಲವು ಶ್ರೀಮಂತ ಹಾಗೂ ಅಷ್ಟೇನೂ ಶ್ರೀಮಂತವಲ್ಲದ ಆದರೆ ಶ್ರೀಮಂತಿಕೆಯ ಅಂಚಿನಲ್ಲಿರುವ ಸಮಾಜಗಳ ಜೀವನಶೈಲಿಯಿಂದ ಸ್ಪಷ್ಟವಾಗುವುದೇನೆಂದರೆ ಹೆಚ್ಚು ಬೇಡಿಕೆಗಳು ಹೆಚ್ಚು ಪೂರೈಕೆಯಾದ ಹಾಗೆಲ್ಲ ಹೊಸ ಹೊಸ ಬೇಡಿಕೆ ಅತೃಪ್ತಿಗಳು ಸೃಷ್ಟಿಯಾಗುತ್ತ ಹೋಗುತ್ತವೆ. ಭೋಗ ಹೆಚ್ಚಿದಷ್ಟೂ ಕಟ್ಟಳೆಯಾಗುತ್ತದೆ. ಮನುಷ್ಯನ ಮನಸ್ಸು ಹೊಸ ಹೊಸ ರೋಮಾಂಚನಗಳಿಗೆ ಹಾತೊರೆಯುತ್ತದೆ. ಹೀಗಾಗಿ ಜೀವನದ ಸರಳ ಸುಖಸಂತೋಷಗಳು ಕೈಯಿಂದ ನುಣುಚಿ ಜಾರಿ ಹೋಗುತ್ತವೆ.

ಈಗ ನಮ್ಮ ಸುತ್ತ ಅತ್ಯಾಧುನಿಕ 'ಸ್ಟೀರಿಯೋ ಸಿಸ್ಟಮು'ಗಳು, 'ಕಾಂಪ್ಯಾಕ್ಟ್ ಡಿಸ್ಕ್'ಗಳೂ ಕಿಕ್ಕಿರಿದು ತುಂಬಿದ್ದರೂ ನಮಗೆ ಒಂದರ್ಧಗಂಟೆ ಕಾಲ ನೆಮ್ಮದಿಯಿಂದ ಸಂಗೀತದಲ್ಲಿ ಮೈಮರೆತು ಕೂರುವಷ್ಟು ಶಾಂತಿ ಇಲ್ಲ. ಸಿದ್ಧವಾಗಿರಿಸಿದ ರಸಭಕ್ಷ್ಯಗಳ ನಡುವೆ ಕೂತು ಏನನ್ನೂ ರುಚಿ ನೋಡಲಾರದ ಸಿಹಿಮೂತ್ರ ರೋಗದ ಅಂಗಡಿ ಮಾಲೀಕನ ಸ್ಥಿತಿ ನಮ್ಮದು.

– ಎಚ್.ವೈ.ಶಾರದಾ ಪ್ರಸಾದ್

ಶಿಕ್ಷಣದ ಖಾಸಗೀಕರಣ
ಎಲ್ಲಿದೆ ಶಿಕ್ಷಣದ ಹೂರಣ?

– ಸುರೇಂದ್ರ ಕೌಲಗಿ

ಶಿಕ್ಷಣ ಮಾನವ ಸಂಸ್ಕೃತಿಯ ಮುನ್ನಡೆಗಾಗಿ ಎಂದು ನಂಬಿರುವ ಶಿಕ್ಷಣ ಪ್ರೇಮಿಗಳಿಗೆ ಆಘಾತದ ಬೆಳವಣಿಗೆಯೊಂದು ಕಾದಿದೆ. ಕರ್ನಾಟಕ ಸರ್ಕಾರ ಅಜೀಂ ಪ್ರೇಮ್‌ಜಿ ಕೈಗಾರಿಕಾ ಕಂಪನಿಯೊಂದಕ್ಕೆ ತನ್ನದೇ ಹೆಸರಿನ ವಿಶ್ವವಿದ್ಯಾಲಯವನ್ನು ಪ್ರಾರಂಭಿಸಲು ಅನುಮತಿಕೊಡಲು ಮನಸ್ಸುಮಾಡಿದೆ. ವಿಧಾನಸಭೆಯ ಒಪ್ಪಿಗೆ ಪಡೆದಾದನಂತರ ಈ ವಿಶ್ವವಿದ್ಯಾಲಯದ ಸ್ಥಾಪನೆಯ ಪ್ರಕ್ರಿಯೆಗಳು ಪ್ರಾರಂಭವಾಗಲಿವೆ. ವಿಧಾನಸಭೆಯಲ್ಲಿ ಈ ಸಂಬಂಧವಾದ ಮಸೂದೆ ಸುಲಭವಾಗಿ ಅಂಗೀಕಾರಗೊಳ್ಳುವುದಿಲ್ಲವೆಂಬುದು ನಿಜವಾದರೂ ಆಡಳಿತ ಪಕ್ಷ ತನ್ನ ಬಹುಮತದ ಬಲದಿಂದ ಆ ಮಸೂದೆಯು ಅಂಗೀಕಾರಗೊಳ್ಳುವಂತ ಮಾಡಿದರೆ ಅದರಲ್ಲೇನು ಆಶ್ಚರ್ಯವಿಲ್ಲ.

ಈಗಾಗಲೆ ಖಾಸಗಿಕರಣದ ಕಾರಣದಿಂದ ಶಿಕ್ಷಣ ಕ್ಷೇತ್ರ ತನ್ನೆಲ್ಲ ಜೀವಸತ್ವವನ್ನು ಕಳೆದುಕೊಂಡಿದೆ. ಹೊಸ ಜೀವಕ್ಕೆ ಜನ್ಮಕೊಡದ ಬಂಜೆಯಾಗಿದೆ. ಎಲ್ಲರಿಗೂ ಸಮ ಶಿಕ್ಷಣ, ಎಲ್ಲರಿಗೂ ಸಮ ಅವಕಾಶ, ಎಲ್ಲರಿಗೂ ಸಮ ಬಾಳು ಎಂಬ ತತ್ವವನ್ನು ಗಾಳಿಗೆ ತೂರಿ ಎಷ್ಟೋ ಕಾಲವಾಯಿತು. ಅಲ್ಲದೆ, ಶಿಕ್ಷಣವೇ ಜಾತಿಯತೆ, ಧರ್ಮಾಂಧತೆ, ವರ್ಗೀಕರಣ, ವ್ಯಕ್ತಿನಿಷ್ಠವಾದ ಮುಂತಾದ ರೋಗಗಳು ಹಬ್ಬುವ ಸ್ಥಳವಾಗಿದೆ. ಸ್ವಾತಂತ್ರ್ಯ ಬಂದ ಮೇಲೆ ಶಿಕ್ಷಣ ಕ್ಷೇತ್ರ ಸರಕಾರದ ಅಧಿಕಾರಕ್ಕೆ ಒಳಪಟ್ಟಿತು. ಆದ್ದರಿಂದ ಶಿಕ್ಷಣ ಕ್ಷೇತ್ರ ೧೯೫೦-೫೧ ರಿಂದ ೧೯೯೯-೨೦೦೦ ಇಸ್ವಿ ವರೆಗೆ ಅಂದರೆ ಐವತ್ತು ವರ್ಷಗಳ ಅವಧಿಯಲ್ಲಿ ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ೨.೨೩ ಲಕ್ಷದಿಂದ ೮.೪೦ ಲಕ್ಷಕ್ಕೆ ಏರಿತು. ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ೧.೫ ದಶಲಕ್ಷದಿಂದ ೨೮.೨ ದಶಲಕ್ಷಕ್ಕೆ ಏರಿತು. ಕಾಲೇಜುಗಳ ಸಂಖ್ಯೆ ೫೭೮ ರಿಂದ ೯೯೦೬ಕ್ಕೂ, ವಿಶ್ವವಿದ್ಯಾನಿಲಯಗಳ ಸಂಖ್ಯೆ ೨೭ ರಿಂದ ೨೪೪ಕ್ಕೂ ಏರಿತು. ಇತ್ತೀಚಿಗಿನ ದಶಕದಲ್ಲಿ ಶಾಲೆಗಳ, ಕಾಲೇಜುಗಳ ಮತ್ತು ವಿಶ್ವವಿದ್ಯಾನಿಲಯಗಳ ಸಂಖ್ಯೆ ಗಣನೀಯವಾಗಿ ಏರಿದೆ. ಇಷ್ಟು ದೊಡ್ಡ ಸಂಖ್ಯೆಯ ಶಿಕ್ಷಣ ಸಂಸ್ಥೆಗಳಲ್ಲಿ ಓದುವ ಕೋಟ್ಯಾವಧಿ ಮಕ್ಕಳ ಭವಿಷ್ಯ ನಿರ್ಮಾಣದ ಗುತ್ತಿಗೆಯನ್ನು ಸರ್ಕಾರ ತನ್ನ ಕೈಗೆ ತೆಗೆದುಕೊಂಡಿದೆ. ಜೊತೆಗೆ, ಖಾಸಗೀ ಕ್ಷೇತ್ರದಲ್ಲಿರುವ ಶಿಕ್ಷಣ ಸಂಸ್ಥೆಗಳಲ್ಲಿ ಓದುವ ಮಕ್ಕಳ ಸಂಖ್ಯೆಯೇನೂ ಕಡಿಮೆ ಇಲ್ಲ. ಈ ಖಾಸಗೀ ಸಂಸ್ಥೆಗಳೂ ಕೂಡ ತಮ್ಮದೇ ಆದ ರೀತಿಯಲ್ಲಿ ಮಕ್ಕಳ ಭವಿಷ್ಯದ ನಿರ್ಮಾಣದ ಗುತ್ತಿಗೆಯನ್ನು ಕೈಗೆ ತೆಗೆದುಕೊಂಡಿವೆ. ಅಂದರೆ ದೇಶದಲ್ಲಿ ಏಕಕಾಲದಲ್ಲಿ ಎರಡು ಪ್ರಕಾರದ ಶೈಕ್ಷಣಿಕ ಗುತ್ತಿಗೆದಾರರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರ ಒಂದು ಪ್ರಕಾರದ ಗುತ್ತಿಗೆದಾರನಾದರೆ,

ಖಾಸಗಿ ಶಿಕ್ಷಣ ಸಂಸ್ಥೆಗಳು ಇನ್ನೊಂದು ಪ್ರಕಾರದ ಗುತ್ತಿಗೆದಾರರು. ಈ ಗುತ್ತಿಗೆದಾರರಲ್ಲಿ ಪುನಃ ಹಲವಾರು ಒಳ ಪ್ರಕಾರದ ಗುತ್ತಿಗೆದಾರರಿದ್ದಾರೆ. ಅನಿದಾನಿತ ಶಿಕ್ಷಣ ಸಂಸ್ಥೆಗಳು, ಅನುದಾನ ರಹಿತ ಶಿಕ್ಷಣ ಸಂಸ್ಥೆಗಳು, ಶಾಶ್ವತವಾಗಿ ಅನುದಾನಕ್ಕೆ ನಿರ್ಬಂಧ ಹಾಕಿಕೊಂಡಿರುವ ಸಂಸ್ಥೆಗಳು. ಅಲ್ಪಸಂಖ್ಯಾತ ಧರ್ಮೀಯರ ಶಿಕ್ಷಣ ಸಂಸ್ಥೆಗಳು, ಬಹುಧರ್ಮೀಯರ ಶಿಕ್ಷಣ ಸಂಸ್ಥೆಗಳು, ಹಿಂದುಳಿದ ಜಾತಿಯವರ ಶಿಕ್ಷಣ ಸಂಸ್ಥೆಗಳು, ಕನ್ನಡ ಮಾಧ್ಯಮದ ಶಿಕ್ಷಣ ಸಂಸ್ಥೆಗಳು, ಇಂಗ್ಲಿಷ್ ಮಾಧ್ಯಮದ ಶಿಕ್ಷಣ ಸಂಸ್ಥೆಗಳು, ಬಹು ಲಿಂಗೀಯ ಶಿಕ್ಷಣ ಸಂಸ್ಥೆಗಳು, ಏಕ ಲಿಂಗೀಯ ಶಿಕ್ಷಣ ಸಂಸ್ಥೆಗಳು. ಈ ಪ್ರಕಾರದ ಶಿಕ್ಷಣ ಸಂಸ್ಥೆಗಳಲ್ಲದೆ ಸಂಸ್ಕೃತ ಪಾಠಶಾಲೆಗಳು, ಉರ್ದು ಶಾಲೆಗಳಂಥ ಒಂದೇ ಭಾಷೆ ಬೋಧಿಸುವ ಶಿಕ್ಷಣ ಸಂಸ್ಥೆಗಳು. ಇಷ್ಟೆಲ್ಲ ವಿಭೇದಗಳು ಸಾಲದೆಂಬಂತೆ ರಾಜ್ಯ ಸರ್ಕಾರಗಳು ಸ್ಥಾಪಿಸಿರುವ ಪರೀಕ್ಷಾ ಮಂಡಳಿಗಳು, ಕೇಂದ್ರ ಸರ್ಕಾರ ಸ್ಥಾಪಿಸಿರುವ ಪರೀಕ್ಷಾ ಮಂಡಳಿಗಳ ಪಠ್ಯಕ್ರಮಾನುಸಾರವಾಗಿ ಪಾಠ ಮಾಡುವ ಶಿಕ್ಷಣ ಸಂಸ್ಥೆಗಳೂ ಇವೆ. ಸರ್ಕಾರಗಳೇ ನೇರವಾಗಿ ನಡೆಸುವ ಮುರಾರ್ಜಿ ವಸತಿ ಶಾಲೆಗಳು, ಕೇಂದ್ರೀಯ ಪಾಠಶಾಲೆಗಳು ವೈವಿಧ್ಯತೆಯನ್ನು ಹೆಚ್ಚಿಸಿವೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಶಿಶುವಿಹಾರದಿಂದ ಹಿಡಿದು ಅಂತಾರಾಷ್ಟ್ರೀಯ ಶಾಲೆಯವರೆಗೆ ನಡೆಸುವ ಶಾಲೆಗಳಿಗಂತೂ ಲೆಕ್ಕವೇ ಇಲ್ಲ. ದೇಶದಾದ್ಯಂತ ಖಾಸಗಿ ವಲಯದಲ್ಲಿ ನಡೆಯುವ ಶಿಕ್ಷಣ ಸಂಸ್ಥೆಗಳ ನಿಖರವಾದ ಒಟ್ಟು ಸಂಖ್ಯೆ ಇನ್ನೂ ಲಭ್ಯವಾಗಬೇಕಿದೆ. ದೇಶದಲ್ಲಿ ಈ ಬಗೆಬಗೆಯ ಶಿಕ್ಷಣ ಸಂಸ್ಥೆಗಳ ಜೊತೆಗೆ ವಿದೇಶಿ ಶಿಕ್ಷಣ ಸಂಸ್ಥೆಗಳು ತಮ್ಮ ಶಾಖೆಗಳನ್ನು ಭಾರತದಲ್ಲಿ ಪ್ರಾರಂಭಿಸಲಿವೆ. ಇದಕ್ಕೆ ಮುಖ್ಯ ಕಾರಣ ಭಾರತ ವಿಶ್ವ ವಾಣಿಜ್ಯ ಸಂಸ್ಥೆಗಳು ರೂಪಿಸಿರುವ ಗ್ಯಾಟ್ ಒಪ್ಪಂದಕ್ಕೆ ಹಸ್ತಾಕ್ಷರ ಹಾಕಿದೆ. ತತ್ಪರಿಣಾಮವಾಗಿ ಭಾರತದಲ್ಲಿ ಅನೇಕ ವಿಶ್ವವಿದ್ಯಾನಿಲಯಗಳೂ ಬರಲಿವೆ. ಹೊರಗಿನಿಂದ ಬರುವ ಶಿಕ್ಷಣ ಸಂಸ್ಥೆಗಳ ಜೊತೆಗೆ ಭಾರತದ ಶಿಕ್ಷಣ ಸಂಸ್ಥೆಗಳು ಸ್ಪರ್ಧೆ ನಡೆಸಬೇಕಾಗುತ್ತದೆ. ಯುಜಿಸಿ ಮತ್ತು ಎಐಸಿಟಿಇ ಅಂಥ ಸಂಸ್ಥೆಗಳು ಬಹು ವಿಲಕ್ಷಣವಾದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಆ ಸಮಸ್ಯೆಗಳನ್ನು ಭಾರತದ ಹಿತವನ್ನು ಕಾಪಾಡಿಕೊಳ್ಳುತ್ತ ಬಿಡಿಸಲು ಸಾಧ್ಯವೆ ಎಂಬ ಪ್ರಶ್ನೆ ಸಹಜವಾಗಿ ಹುಟ್ಟುತ್ತದೆ. ಮುಖ್ಯವಾಗಿ ಭಾರತೀಯ ಮತ್ತು ವಿದೇಶೀಯ ಶಿಕ್ಷಣ ಸಂಸ್ಥೆಗಳ ಮಧ್ಯೆ ಉಂಟಾಗುವ ಸ್ಪರ್ಧೆಯ ಪರಿಣಾಮವಾಗಿ ಶಿಕ್ಷಣ ದುಬಾರಿಗೊಳ್ಳುತ್ತದೆ. ಆಗ ಸಾಮಾನ್ಯ ಶಿಕ್ಷಣವೂ ಸಹ ತುಂಬ ದುಬಾರಿಯಾಗುತ್ತದೆ. ದೇಶದ ಬಹುಸಂಖ್ಯಾತ ಬಡ ಜನರಿಗೆ ಆ ಶಿಕ್ಷಣ ಗಗನ ಕುಸುಮದಂತಾಗುತ್ತದೆ. ಆದ್ದರಿಂದ ವಿದೇಶಿ ವಿಶ್ವವಿದ್ಯಾಲಯಗಳನ್ನು ದೇಶದೊಳಕ್ಕೆ ಪ್ರವೇಶಿಸಲು ಅವಕಾಶಕೊಡುವ ಮುನ್ನ ದೇಶದ ಶಿಕ್ಷಣ ತಜ್ಞರು ಸಾರಾಸಾರವಾಗಿ ಆಲೋಚಿಸಿ ಸರ್ಕಾರಕ್ಕೆ ಮಾರ್ಗದರ್ಶನ ಕೊಡಬೇಕಿದೆ.

ಇಂಥ ಅಸ್ಪಷ್ಟ, ಅಸಂದಿಗ್ಧ ಅನುಚಿತ ಶೈಕ್ಷಣಿಕ ವಾತಾವರಣ ದೇಶದಲ್ಲಿರುವಾಗ ನಮ್ಮ ರಾಜ್ಯ ಸರ್ಕಾರವು ಕೈಗಾರಿಕಾ ಕಂಪನಿಗೆ ತನ್ನ ಹೆಸರಿನಲ್ಲಿ ಒಂದು ವಿಶ್ವವಿದ್ಯಾನಿಲಯವನ್ನೇ ಪ್ರಾರಂಭಿಸಲು ಅನುಮತಿಕೊಡಲು ಮುಂದಾಗುತ್ತಿರುವುದು ಚಿಂತಾಜನಕ ಬೆಳವಣಿಗೆಯೇ ಸರಿ. ಈಗ ಒಂದು ಕಂಪನಿಗೆ ವಿಶ್ವವಿದ್ಯಾನಿಲಯ ಸ್ಥಾಪಿಸಿ–ನಡೆಸುವಂಥ ಗುರುತರ ಜವಾಬ್ದಾರಿಯನ್ನು ಕೊಟ್ಟರೆ ರಾಜ್ಯದಲ್ಲಿ ಈಗಾಗಲೇ

ತಮ್ಮ ವಿವಿಧ ಧನಾರ್ಜನೆಯ ವಿವಿಧ ಪ್ರಕಾರದ ಶೈಕ್ಷಣಿಕ ಸಂಸ್ಥೆಗಳನ್ನು ಹೊಂದಿ ಧನಾಢ್ಯವಾಗಿರುವ ಶಿಕ್ಷಣ ಸಂಸ್ಥೆಗಳು, ಮಠಗಳು ಕೂಡ ತಮ್ಮ ತಮ್ಮ ಹೆಸರಿನಲ್ಲಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವುದಕ್ಕೆ ಮುಂದೆ ಬರುವುದರಲ್ಲಿ ಸಂದೇಹವಿಲ್ಲ. ವಿಶ್ವವಿದ್ಯಾನಿಲಯಗಳೆಂದರೆ ಅಲ್ಲಿ ಪಿ.ಹೆಚ್.ಡಿ. ಪದವಿಗಳಿಗೆ ಅವಕಾಶವಿರಲೇಬೇಕು. ಈ ಪದವಿಗಳನ್ನು ಕೊಡದ ವಿಶ್ವವಿದ್ಯಾನಿಲಯಗಳು ಹಾಲುಕೊಡದ ಗೊಡ್ಡ ಹಸುಗಳೆಂದು ಭಾವಿಸಲ್ಪಡುತ್ತವೆ. ಯಾವಾಗ ಖಾಸಗಿ ವಿಶ್ವವಿದ್ಯಾನಿಲಯಗಳ ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳ ಸಂಖ್ಯೆ ಹೆಚ್ಚಾಗುತ್ತದೋ ಆಗ ಸಹಜವಾಗಿಯೇ ಈ ಪಿ.ಹೆಚ್.ಡಿ. ಪದವೀಧರರ ಸಂಖ್ಯೆಯೂ ಹೆಚ್ಚಾಗುತ್ತದೆ. ಈಗ ಇರುವ ವಿಶ್ವವಿದ್ಯಾನಿಲಯಗಳು ಕೊಡುತ್ತಿರುವ ಪಿ.ಹೆಚ್.ಡಿ. ಪದವಿಗಳ ಯೋಗ್ಯತೆ ಬಗ್ಗೆ ಬಹಳಷ್ಟು ಟೀಕೆ ಕೇಳಿಬರುತ್ತದೆ. ಈ ವಿಷಯದಲ್ಲಿ ವಿಶ್ವವಿದ್ಯಾನಿಲಯಗಳು ಭ್ರಷ್ಟಾಚಾರಕ್ಕೆ ಒಳಗಾಗಿವೆ ಎಂಬ ದೂರು ಸಾಮಾನ್ಯವಾಗಿ ಕೇಳಿ ಬರುತ್ತಿದೆ. ಇಂಥ ಸಂದರ್ಭದಲ್ಲಿ ಜಿಲ್ಲೆಗೊಂದು ವಿಶ್ವವಿದ್ಯಾಲಯ, ತಾಲ್ಲೂಕಿಗೊಂದು ವಿಶ್ವವಿದ್ಯಾಲಯ ಮತ್ತು ಡೀಮ್ಡ್ ವಿಶ್ವವಿದ್ಯಾಲಯ ಪ್ರಾರಂಭವಾದರೆ ಆ ಪಿ.ಹೆಚ್.ಡಿ.ಗಳ ಗುಣಮಟ್ಟ ಎಷ್ಟಿರಬಹುದೆಂದು ಯಾರಾದರೂ ಊಹಿಸಬಹುದು.

ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯದ ಪರವಾಗಿ ಐ.ಟಿ. ಕಂಪನಿ ವಿಪ್ರೋ ೨೫ ಕೋಟಿ ರೂಪಾಯಿಗಳನ್ನು ದತ್ತಿ ನಿಧಿಯಾಗಿ ಠೇವಣಿ ಇಡುವುದು. ಈ ವಿಶ್ವವಿದ್ಯಾಲಯದಲ್ಲಿ ಬೋಧನೆ, ಪ್ರಶಿಕ್ಷಣ, ಸಂಶೋಧನೆ, ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ನಿರ್ವಹಣೆ ಮತ್ತು ನೀತಿ ನಿರ್ಧಾರ ಇತ್ಯಾದಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಆದರೆ ಈ ಯಾವ ಕಾರ್ಯಕ್ರಮಗಳು ಈಗಿರುವ ಮಾನ್ಯತೆ ಪಡೆದ ಯಾವುದೇ ರಾಷ್ಟ್ರೀಯ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡದೇ ಇರುವಂಥದಾಗಿಲ್ಲ. ಆದ್ದರಿಂದ ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾನಿಲಯ ಯಾವ ರೀತಿ ತೀರ ಭಿನ್ನವಾಗಿ ಕೆಲಸಮಾಡುತ್ತದೆಂಬುದು ಗೊತ್ತಾಗುತ್ತಿಲ್ಲ. ಅಲ್ಲದೆ ಈ ವಿಶ್ವವಿದ್ಯಾನಿಲಯ ಒಂದು ಬೃಹತ್ ಕೈಗಾರಿಕೆಯ ಕೂಸಾಗಿರುವುದರಿಂದ ಸರ್ಕಾರದ ಬಹಳಷ್ಟು ನಿರ್ಬಂಧಗಳಿದ್ದಾಗ್ಯೂ ಅದು ಪರೋಕ್ಷವಾಗಿ ಆ ಕೈಗಾರಿಕೆಯ ಹಿತಾಸಕ್ತಿಗನುಗುಣವಾಗಿಯೇ ಕೆಲಸಮಾಡುವ ಸಾಧ್ಯತೆಗಳು ಹೆಚ್ಚಾಗಿರಲು ಸಾಧ್ಯ. ಇಂದಿನ ಶಿಕ್ಷಣ ಪದ್ಧತಿಯಲ್ಲಿ, ಶಿಕ್ಷಣ ಸಂಸ್ಥೆಗಳ ಧ್ಯೇಯೋದ್ದೇಶಗಳಲ್ಲಿ, ವಿದ್ಯಾರ್ಥಿಗಳಲ್ಲಿ ಹಣಸಂಪಾದನೆಯೇ ಮುಖ್ಯವಾಗಿರುವಾಗ ಖಾಸಗಿ ವಿಶ್ವವಿದ್ಯಾನಿಲಗಳ ಸ್ಥಾಪನೆಯಿಂದ ಶಿಕ್ಷಣ ಕ್ಷೇತ್ರದಲ್ಲಿ ಇನ್ನೊಂದಷ್ಟು ಮಲಿನತೆ ಸೇರುವುದರಲ್ಲಿ ಸಂದೇಹವಿಲ್ಲ. ಸರ್ಕಾರ ಇಂಥ ಕ್ರಮವನ್ನು ಕೈಬಿಡಬೇಕು ಮತ್ತು ಶಿಕ್ಷಣ ಪ್ರೇಮಿಗಳು ಸಹ ಶಿಕ್ಷಣದ ಖಾಸಗಿಕರಣದ ವಿರುದ್ಧ ಆಂದೋಲನ ನಡೆಸಬೇಕು.

ಸ್ವಾತಂತ್ರ್ಯ ಬಂದಾದ ನಂತರ ಕೇಂದ್ರ ಸರ್ಕಾರ ಹತ್ತಾರು ಶಿಕ್ಷಣ ಆಯೋಗಗಳನ್ನು ರಚಿಸಿ ದೇಶದ ಶಿಕ್ಷಣ ವ್ಯವಸ್ಥೆಯನ್ನು ಸುಧಾರಿಸಲು ಪ್ರಯತ್ನಿಸಿದೆ. ಅವುಗಳಲ್ಲಿ ಮುಖ್ಯವಾದವುಗಳು ಡಾ.ರಾಧಾಕೃಷ್ಣನ್ ಆಯೋಗ, ಕೊಠಾರಿ ಆಯೋಗ ಮುಂತಾದವುಗಳು. ಇವಲ್ಲದೆ ರಾಜ್ಯ ಸರ್ಕಾರಗಳು ಶೈಕ್ಷಣಿಕ ಸುಧಾರಣಾ ಸಮಿತಿಗಳನ್ನು ರಚಿಸುತ್ತಲೇ ಬಂದಿವೆ. ಸುಧಾರಣೆಯ ಇಷ್ಟೆಲ್ಲಾ ಪ್ರಯತ್ನ ನಡೆದ ಮೇಲೂ ದೇಶದ

ಶಿಕ್ಷಣ ಪದ್ಧತಿಗೆ ದಿಕ್ಕು-ದೆಶೆ-ಸಿದ್ಧಾಂತ-ಆದರ್ಶ-ಗುರಿ ಯಾವುದೂ ಇಲ್ಲದೆ ಅವ್ಯವಸ್ಥೆಯ ಆಗರದಲ್ಲಿ, ಭ್ರಷ್ಟಾಚಾರದ ಸಾಗರದಲ್ಲಿ ಮುಳುಗಿದೆ. ಇಂಥ ಅಕಾಲದಲ್ಲಿ ವಿಶ್ವವಿದ್ಯಾನಿಲಯಗಳನ್ನು ಖಾಸಗಿ ವಾಣಿಜ್ಯ ಸಂಸ್ಥೆಗಳು ಪ್ರಾರಂಭಿಸುವುದಕ್ಕೆ ಅವಕಾಶ ದೊರೆಯುತ್ತಿರುವುದು ದುರ್ದೈವದ ಸಂಗತಿಯಾಗಿದೆ.

ಸರ್ಕಾರಗಳ ಶಿಕ್ಷಣ ನೀತಿ ಎಷ್ಟು ಕೆಟ್ಟು ಹೋಗಿದೆಯೆಂದರೆ ಅದನ್ನು ಸುಸ್ಥಿತಿಗೆ ತರುವುದು ಸಾಧ್ಯವೇ ಇಲ್ಲ ಎಂಬಂತಾಗಿದೆ. ತಪ್ಪು ಶಿಕ್ಷಣ ನೀತಿಯನ್ನು ಅನುಸರಿಸಿದ ಪಾಪದ ಫಲವನ್ನು ಇಡೀ ದೇಶ ಅನುಭವಿಸಬೇಕಾಗಿ ಬಂದಿದೆ. ಅನೇಕ ಸಂಶೋಧನಾ ಸಂಸ್ಥೆಗಳು ನಡೆಸಿದ ಸಮೀಕ್ಷೆಯ ಪ್ರಕಾರ ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಕಾಗುಣಿತ ಬರುವುದಿಲ್ಲ, ಮಗ್ಗಿ, ಕೂಡುವಿಕೆ-ಕಳೆಯುವಿಕೆಯಂಥ ಸಾಮಾನ್ಯ ಗಣಿತ ಬರುವುದಿಲ್ಲವೆಂದು ತಿಳಿಸಿವೆ. ಶಿಕ್ಷಕರ ಬೋಧನಾ ಕೌಶಲ್ಯವೂ ಅಪೇಕ್ಷಿತ ಮಟ್ಟದಲ್ಲಿಲ್ಲವೆಂದು ತಿಳಿಸಿವೆ. ಕಾಲೇಜುಗಳಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿಯೂ ಯಾವುದೂ ಸರಿಯಿಲ್ಲವೆಂಬ ಅಭಿಪ್ರಾಯ ಸಾರ್ವತ್ರಿಕವಾಗಿ ಮೂಡಿದೆ. ವಿಶ್ವವಿದ್ಯಾನಿಲಯಗಳಲ್ಲಿ ರ್‍ಯಾಗಿಂಗ್‌ನಂಥ ಅಮಾನವೀಯ, ಸಂಸ್ಕೃತಿಹೀನ, ಶಿಕ್ಷಣ ಕ್ಷೇತ್ರಕ್ಕೆ ಭೂಷಣವಲ್ಲದ ಘಟನೆಗಳು ನಡೆಯುತ್ತಲೇ ಇವೆ.

ಈಗ ಯಶಪಾಲ ಸಮಿತಿಯ ವರದಿ ಬಂದಿದೆ. ಅದು ದೇಶದ ಇಡೀ ಉನ್ನತ ಶಿಕ್ಷಣ ವ್ಯವಸ್ಥೆಗೆ ಕಾಯಕಲ್ಪ ಮಾಡಬೇಕೆಂದು ಸೂಚಿಸಿದೆ. ಡಿಮ್ಡ್ ವಿಶ್ವವಿದ್ಯಾನಿಲಯಗಳ ಮೂಲ ಸಾಮರ್ಥ್ಯವನ್ನೇ ಅದು ಪ್ರಶ್ನಿಸಿದೆ. ಅಲ್ಲದೆ, ಕೇಂದ್ರ ಸರ್ಕಾರ ಯದ್ವಾತದ್ವಾ ಮಂಜೂರು ಮಾಡುತ್ತಿರುವ ಐಐಎಮ್ ಮತ್ತು ಐಐಟಿಯಂಥ ಉನ್ನತ ಶಿಕ್ಷಣ ಸಂಸ್ಥೆಗಳ ಬಗ್ಗೆ ತನ್ನ ಗಂಭೀರ ಚಿಂತೆಯನ್ನು ಯಶಪಾಲ್ ಸಮಿತಿ ವ್ಯಕ್ತಪಡಿಸಿದೆ. ಅಲ್ಲಲ್ಲಿ ಕೆಲ ತುಂಬ ಉನ್ನತ ಗುಣಮಟ್ಟದ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುತ್ತ, ರಾಜ್ಯಗಳಲ್ಲಿ ಹಣದ ಅಭಾವದಿಂದ ಸೊರಗುತ್ತಿರುವ ವಿಶ್ವವಿದ್ಯಾನಿಲಯಗಳ ಬಗ್ಗೆ ಚಿಂತಿಸದೇ ಇರುವ ಕೇಂದ್ರ ಸರ್ಕಾರದ ನೀತಿಯ ಬಗ್ಗೆಯೂ ಆ ಆಯೋಗ ಆಕ್ಷೇಪಣೆಯೆತ್ತಿದೆ. ಅಷ್ಟೇ ಅಲ್ಲ ಇಂಥ ನೀತಿಯಿಂದಾಗಿ ಸಾಮಾಜಿಕ ಏರುಪೇರು ಉಂಟಾಗುತ್ತದೆಂದೂ ಹೇಳಿದೆ.

ಯಶ್‌ಪಾಲ್ ಸಮಿತಿ ದೇಶದ ಇಡೀ ಶಿಕ್ಷಣ ವ್ಯವಸ್ಥೆಯ ಅವ್ಯವಸ್ಥೆಗೆ ಕನ್ನಡಿ ಹಿಡಿದಿದೆ. ಇದುವರೆಗೆ ಯಾವುದೆಲ್ಲವೂ ಸರಿ ಎಂದು ಒಪ್ಪಿಕೊಳ್ಳಲಾಗಿತ್ತೊ ಅದೆಲ್ಲವೂ ತಪ್ಪು ಎಂದು ಯಶ್‌ಪಾಲ್ ಸಮಿತಿ ಸಾರಿದೆ! ಒಳ್ಳೆಯ ಡೀಮ್ಡ್ ವಿಶ್ವವಿದ್ಯಾನಿಲಯಗಳನ್ನು ಮುಚ್ಚಬೇಕು ಇಲ್ಲವೆ ಅವುಗಳನ್ನು ಪೂರ್ಣಪ್ರಮಾಣದ ವಿಶ್ವವಿದ್ಯಾನಿಲಯಗಳನ್ನಾಗಿ ಪರಿವರ್ತಿಸಬೇಕೆಂದು ಹೇಳಿದೆ. ಈ ಸಲಹೆ ಜಾರಿಗೆ ಬಂದದ್ದೇ ಆದರೆ ಈಗ ದೇಶದಲ್ಲಿರುವ ವಿಶ್ವವಿದ್ಯಾನಿಲಯಗಳ ಸಂಖ್ಯೆ ನಾಲ್ಕುನೂರಕ್ಕೂ ಹೆಚ್ಚಾಗಲಿದೆ. ಯುಜಿಸಿ ಮತ್ತು ಎಐಸಿಟಿಇಗಳನ್ನು ತೆಗೆದು ಹಾಕಿ ಬೇರೊಂದು ನಿಯಂತ್ರಣ ವ್ಯವಸ್ಥೆ ಮಾಡಬೇಕೆಂದು ಸಮಿತಿ ತಿಳಿಸಿದೆ.

ಸಮಗ್ರ ಮತ್ತು ಶ್ರೇಷ್ಠ ಶಿಕ್ಷಣ ಪ್ರತಿಯೊಂದು ಮಗುವಿನ ಹಕ್ಕು ಎಂದು ಕೇಂದ್ರದ ಉನ್ನತ ಶಿಕ್ಷಣ ಮಂತ್ರಿ ಕಪಿಲ್ ಸಿಬಲ್‌ರವರು ಹೇಳಿದ್ದಾರೆ. ಮುಂದಿನ ೧೦೦ ದಿನಗಳಲ್ಲಿ ಯಶಪಾಲ್ ಸಮಿತಿಯ ಶಿಫಾರಸುಗಳನ್ನು ಜಾರಿ ಮಾಡಲಾಗುವುದೆಂದು

ತಿಳಿಸಿದ್ದಾರೆ. ಅಂತೂ ದೇಶದ ಶಿಕ್ಷಣ ಕ್ಷೇತ್ರ ಅಲ್ಲೋಲಕಲ್ಲೋಲಕ್ಕೆ ಒಳಗಾಗಲಿದೆ. ಇಂಥ ಅನಿಶ್ಚಿತ, ಅಸಂದಿಗ್ಧ ಪರಿಸ್ಥಿತಿಯಲ್ಲಿ ಅಜೀಂ ಪ್ರೇಮ್‌ಜಿ ಖಾಸಗಿ ವಿಶ್ವವಿದ್ಯಾನಿಲಯಕ್ಕೆ ಅನುಮತಿ ಕೊಡಲು ಯೋಚಿಸುತ್ತಿರುವುದು ರಾಜ್ಯ ಸರ್ಕಾರದ ನೀತಿ ಎಷ್ಟು ಸೂಕ್ತವೆಂದು ಯೊಚಿಸುವ ಕಾಲ ಬಂದಿದೆ. ಎಲ್ಲಿಯವರೆಗೆ ಶಿಕ್ಷಣ ಯಾವ ರೂಪದಲ್ಲೇಯಾಗಲಿ ಕೇಂದ್ರಿಕೃತವಾಗಿರುತ್ತದೊ ಅಲ್ಲಿಯ ವರೆಗೆ ಮಾನವಕುಲಕ್ಕೆ ಮುಕ್ತಿಯಿಲ್ಲ.

ಸುಪ್ರೀಂ ಕೋರ್ಟ್ ದೇಶದ ಶಿಕ್ಷಣದ ಅನಾರೋಗ್ಯಕರ ಬೆಳವಣಿಗೆಯ ಬಗ್ಗೆ ತನ್ನ ತೀವ್ರತಮವಾದ ಟೀಕೆಯ ಬಾಣವನ್ನು ಬಿಟ್ಟಿದೆ. ಖಾಸಗಿಕರಣದಿಂದ ಶಿಕ್ಷಣ ವ್ಯವಸ್ಥೆ ಹಾಳಾಗಿ ಹೋಗಿದೆ; ಉನ್ನತ ವ್ಯಾಸಂಗ ಶಿಕ್ಷಣ ಸಂಸ್ಥೆಗಳು ಕ್ಯಾಪಿಟೇಶನ್ ಮೂಲಕ ಹಣ ಮಾಡುವ ದಂಧೆಯಲ್ಲಿ ತೊಡಗಿವೆ. ಶಿಕ್ಷಣ ಸಂಸ್ಥೆಗಳಿಗೆ ಮಾನ್ಯತೆ ನೀಡಲು ರೂಪಿಸಲಾಗಿರುವ ಮಾನದಂಡಗಳನ್ನು ಶಿಕ್ಷಣ ನಿಬಂಧಕರು ಕಡೆಗಣಿಸುತ್ತಿದ್ದಾರೆ ಎಂದೆಲ್ಲ ಕೋರ್ಟ್ ಟೀಕಿಸಿದೆ.

ದುರಾದೃಷ್ಟದ ಮಾತೇನೆಂದರೆ ಸ್ವಾತಂತ್ರ್ಯ ಪ್ರಾಪ್ತಿಯಾದಾಗಿನಿಂದಲೂ ಶಿಕ್ಷಣವನ್ನು ಹಣಸಂಪಾದನೆಯ ಸಾಧನವೆಂದೇ ಬಿಂಬಿಸಲಾಗಿದೆ. ನೈತಿಕ ಮೌಲ್ಯರಾಹಿತ್ಯವಾಗಿಯೇ ಶಿಕ್ಷಣವನ್ನು ಕೊಡಲಾಗುತ್ತಿದೆ. ಪಾಶ್ಚಿಮಾತ್ಯ ಶಿಕ್ಷಣ ರೀತಿ–ನೀತಿಗಳೇ ಸ್ವತಂತ್ರ ಭಾರತದ ಶಿಕ್ಷಣ ನೀತಿಗೂ ಅಡಿಪಾಯವಾದವು. ತತ್ಪರಿಣಾಮವಾಗಿ ಶಿಶುವಿಹಾರದ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ಕೊಡಲಾಗುತ್ತಿರುವ ಶಿಕ್ಷಣ ಕೊಬ್ಬರಿಗಿಂತ ಕರಟಕ್ಕೆ ಮಹತ್ವ ಕೊಡುವಂಥಾದ್ದಾಗಿದೆ. ಇತ್ತೀಚಿಗಿನ ಯಶಪಾಲ್ ಸಮಿತಿಯು ಸುಧಾರಣೆಯ ಎಲ್ಲ ಸಲಹೆಗಳನ್ನು ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೊಟ್ಟಿದೆಯೆ ವಿನಃ ಶಿಶುವಿಹಾರ, ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಶಿಕ್ಷಣ, ಪಿ.ಯು.ಸಿ, ಕಾಲೇಜ್ ಶಿಕ್ಷಣ ಇತ್ಯಾದಿಗಳಲ್ಲಿ ಆಗಬೇಕಿರುವ ಆಮೂಲಾಗ್ರ ಬದಲಾವಣೆಯ ಬಗ್ಗೆ ಏನನ್ನೂ ಹೇಳಿದಂತಿಲ್ಲ. ಇದು ಒಂದು ರೀತಿಯಲ್ಲಿ ತಲೆಕೆಳಗಾಗಿ ಪಿರಮಿಡ್ ಕಟ್ಟುವ ಕೆಲಸದಂತಾಗಿದೆ. ಉನ್ನತ ಶಿಕ್ಷಣ ಸಮಾಜಕ್ಕೆ ಹಿತಕಾರಕವಾಗಬೇಕಾದರೆ ಕೆಳಗಿನ ಹಂತದ ಶಿಕ್ಷಣವು ಸುಯೋಗ್ಯವೂ, ಸಮರ್ಥವೂ, ವ್ಯಕ್ತಿವಿಕಸನಕ್ಕೆ ಪೂರ್ತ ಸಹಕಾರಿಯೂ ಆಗುವಂತಿರಬೇಕು. ಶಿಶುವಿಹಾರದಿಂದ ಉನ್ನತ ಶಿಕ್ಷಣದ ವರೆಗೆ ಅವಿಚ್ಛಿನ್ನವಾದ ಕೊಂಡಿಯಿದೆ. ಕೊಂಡಿರೂಪದ ಈ ವ್ಯವಸ್ಥೆಯಲ್ಲಿ ಯಾವ ಒಂದು ಕೊಂಡಿಯೂ ದುರ್ಬಲವಾದರೆ ಇಡೀ ಸರಪಣಿಯೇ ಕಿತ್ತುಹೋಗುವುದು. ಓರ್ವ ಶಿಕ್ಷಣ ತಜ್ಞರು ಹೇಳಿದಂತೆ "ನಿಜವಾದ ಅರ್ಥದಲ್ಲಿ ಬಾಲವಾಡಿಯಿಂದ ತೊಡಗಿ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳನ್ನು ದಾಟಿ ಪಿ.ಯು.ಸಿಯನ್ನು ಮೀರಿ ಕಾಲೇಜು ಶಿಕ್ಷಣದ ಹಂತಕ್ಕೆ ಬರಬೇಕಾದರೆ ಅದೊಂದು ನಿರಂತರ ಪ್ರಕ್ರಿಯೆಯ ಅಂಬೆಗಾಲಿನಿಂದ ದಾಪುಗಾಲಿನ ಪ್ರಯಾಣವಾಗಿರುತ್ತದೆ. ಹಾಗಾಗಿ ಆರೋಗ್ಯಕರ ಶಿಶುವಿಹಾರವೇ ವಿಶ್ವವಿದ್ಯಾಲಯದ ತೊಟ್ಟಿಲನ್ನು ತೂಗಬೇಕಾಗುತ್ತದೆ."

* * *

ಬನ್ನಿ, ಬುರ್ಖಾ ಬಗ್ಗೆ ಮತ್ತೊಮ್ಮೆ ಚಿಂತಿಸೋಣ

– *ತಸ್ಲಿಮಾ ನಸ್ರೀನ್*

(ಫ್ರಾನ್ಸ್ ದೇಶದ ಅಧ್ಯಕ್ಷರು ಬುರ್ಖಾ ವಿರುದ್ಧ ಮಾತನಾಡಿರುವ ಸಂದರ್ಭದಲ್ಲಿ ಈ ಲೇಖನ ಪ್ರಸ್ತುತ.-ಸಂ)

ನಮ್ಮ ತಾಯಿ ಯಾವಾಗಲು ಪರ್ದಾ ಹಾಕಿಕೊಂಡೇ ಇರುತ್ತಿದ್ದರು. ಆಕೆ ಹಾಕಿಕೊಳ್ಳುತ್ತಿದ್ದ ಬುರ್ಖಾ ಹೇಗಿತ್ತೆಂದರೆ, ಬಲೆಯಂಥ ಒಂದು ಇಷ್ಟಗಲ ವಸ್ತ್ರ ಆಕೆಯ ಮುಖವನ್ನೆಲ್ಲ ಮುಚ್ಚಿರುತ್ತಿತ್ತು. ಇದನ್ನು ನೋಡಿದಾಗಲೆಲ್ಲ ನನಗೆ ನೆನಪಾಗುತ್ತಿದ್ದುದು, ನಮ್ಮ ಅಜ್ಜಿಯ ಮನೆಯಲ್ಲಿ ಮಾಂಸವನ್ನು ಜೋಪಾನವಾಗಿಡಲು ಬಳಸುತ್ತಿದ್ದ ಬಟ್ಟೆಯ ತುಂಡು. ಸಾಮಾನ್ಯವಾಗಿ ಮಾಂಸವನ್ನು ಜೋಪಾನವಾಗಿ ಇಡಲು ಇಂಥ ಎರಡು ಬಗೆಯ ತಂತ್ರಗಳಿವೆ. ಒಂದು, ಬಟ್ಟೆಯ ಪರದೆ ಹಾಕುವುದು; ಇನ್ನೊಂದು, ಲೋಹದಿಂದ ತಯಾರಿಸಿದ ಇಂಥದೇ ಪರದೆ. ಎರಡರ ಉದ್ದೇಶವೂ ಒಂದೇ– ಮಾಂಸವನ್ನು ಜೋಪಾನವಾಗಿ ನೋಡಿಕೊಳ್ಳುವುದು. ನಮ್ಮ ತಾಯಿಗೆ ಹೀಗೆ ಬುರ್ಖಾ ಹಾಕಿದ್ದು, ತೀರಾ ಸಾಂಪ್ರದಾಯಿಕವಾಗಿದ್ದ ಅವಳ ತವರುಮನೆ. ಹೀಗೆ ಬುರ್ಖಾ ಹಾಕುವಾಗ ಅವರೆಲ್ಲ 'ಬುರ್ಖಾ ಹಾಕಿಕೊಳ್ಳುವುದೆಂದರೆ ಅಲ್ಲಾಹುವಿಗೆ ವಿಧೇಯತೆಯಿಂದ ನಡೆದುಕೊಂಡಂತೆ. ಹೀಗೆ ನೀನು ವಿಧೇಯಳಾಗಿ ನಡೆದುಕೊಂಡರೆ, ಅದರಿಂದ ಅಲ್ಲಾಹುವಿಗೆ ಖುಷಿಯಾಗುತ್ತದೆ... ಆ ಅಲ್ಲಾಹು ನಿನ್ನನ್ನು ಯಾವ ಕಷ್ಟಕೋಟಲೆಗಳಿಗೂ ಸಿಕ್ಕಿಸದೆ ಸುಖವಾಗಿ ಇಟ್ಟಿರುತ್ತಾನೆ' ಎಂದು ಹೇಳಿದರು. ಅಲ್ಲಾಹುವಿನ ಬಗ್ಗೆ ಬಹಳ ಭಯ–ಭಕ್ತಿ ಹೊಂದಿದ್ದ ಅವರ ಅಪ್ಪನಿಗೆ ಸಿಕ್ಕಾಪಟ್ಟೆ ಹೆದರುತ್ತಿದ್ದ ನಮ್ಮ ತಾಯಿ ಇದನ್ನೆಲ್ಲ ಮರುಮಾತಿಲ್ಲದೆ ಒಪ್ಪಿಕೊಂಡಳು. ನಮ್ಮ ಅಜ್ಜ(ತಾಯಿಯ ಅಪ್ಪ) ಎಷ್ಟೊಂದು ಮೌಢ್ಯ ತುಂಬಿದ ಆಸಾಮಿಯೆಂದರೆ, 'ನೀನು ಬುರ್ಖಾ ಹಾಕಿಕೊಳ್ಳದೆ ಇದ್ದರೆ ಪರಿಸ್ಥಿತಿ ನೆಟ್ಟಗಿರುವುದಿಲ್ಲ...' ಎಂದು ಮಗಳಿಗೆ ಧಮಕಿ ಹಾಕುತ್ತಿದ್ದ!

ನಾನು ಆಗಾಗ್ಗೆ ನಮ್ಮ ತಾಯಿಗೆ, 'ನೀನು ಹೀಗೆ ಬುರ್ಖಾ ಹಾಕಿಕೊಳ್ಳುತ್ತೀಯಲ್ಲ, ನಿನಗೆ ಕತ್ತಲಾಗುವುದಿಲ್ಲವೇ? ಉಸಿರುಗಟ್ಟಿದಂತಾಗುವುದಿಲ್ಲವೇ? ನಿನಗೆ ಇದರ ಬಗ್ಗೆಯೆಲ್ಲ ಸಿಟ್ಟೇ ಬರುವುದಿಲ್ಲವಾ? ಆ ಬುರ್ಖಾವನ್ನು ಒಂದು ಸಲವಾದರೂ ಕಿತ್ತೆಸೆಯಬೇಕು ಅನಿಸಿಲ್ಲವಾ?' ಎಂದು ಕೇಳುತ್ತಿದ್ದೆ. ಆದರೆ ಇದಕ್ಕೆಲ್ಲ ಅವಳ ಉತ್ತರವೆಂದರೆ, ಗಾಢಮೌನ! ಏಕೆಂದರೆ, ಬುರ್ಖಾದ ವಿರುದ್ಧ ಸೊಲ್ಲೆತ್ತುವುದಾಗಲಿ, ಅದನ್ನು ಕಿತ್ತೆಸೆಯುವುದಾಗಲಿ ಅವಳಿಗೆ ನಿಜವಾಗಿ ಸಾಧ್ಯವಿರಲಿಲ್ಲ. ಆದರೆ ಇದನ್ನೆಲ್ಲ ನಾನು ಮಾಡಿದೆ! ನನಗೆ ಹದಿನಾರು ವರ್ಷವಾಗಿದ್ದಾಗ ನಮ್ಮ ನೆಂಟರ ಹೆಂಗಸೊಬ್ಬಳು, ಬುರ್ಖಾವನ್ನು ನನಗೆ ಉಡುಗೊರೆಯಾಗಿ ಕೊಟ್ಟರು. ಆದರೆ ಅದು

ನನಗೆ ಅಸಹ್ಯವೆನಿಸಿತು. ಕೂಡಲೇ, ಆ ಬುರ್ಖಾವನ್ನು ನಾನು ರೊಯ್ಯನೆ ಎಸೆದೆ!

ಈ ಪರ್ದಾ ಪದ್ಧತಿ ಇವತ್ತು-ನಿನ್ನೆಯದಲ್ಲ. ಕ್ರಿಸ್ತಪೂರ್ವ ೩೦೦ನೇ ಇಸವಿಯಿಂದಲೇ ಇದರ ಚರಿತ್ರೆ ಶುರುವಾಗುತ್ತದೆ. ಮೊದಲು ಇದನ್ನು ಬಳಸಿದವರು, ಆಗರ್ಭ ಶ್ರೀಮಂತರಾಗಿದ್ದ ಅಸ್ಸೀರಿಯನ್ ಕುಟುಂಬಗಳ ಹೆಂಗಸರು. ವಾಸ್ತವವಾಗಿ ಆಗ, ಸಾಮಾನ್ಯ ಮಹಿಳೆಯರು ಮತ್ತು ವೇಶ್ಯೆಯರು ಪರ್ದಾವನ್ನೇ ಬಳಸುವಂತಿರಲಿಲ್ಲ! ಆಮೇಲೆ, ಮಧ್ಯಮವಯಸ್ಸಿನ ಆಂಗ್ಲೋ-ಸ್ಯಾಕ್ಸನ್ ಮಹಿಳೆಯರು ತಮ್ಮ ತಲೆಗೂದಲು ಮತ್ತು ಕೆನ್ನೆಗಳನ್ನು ಹೀಗೆಯೇ ಒಂದು ವಸ್ತ್ರದಿಂದ ಮುಚ್ಚಿಕೊಳ್ಳುತ್ತಿದ್ದರು. ಅಂದರೆ, ಪರ್ದಾದ ಹಿಂದೆ ಧಾರ್ಮಿಕ ಕಾರಣಗಳು ಇಲ್ಲವೇ ಇಲ್ಲ ಎನ್ನುವುದು ಸ್ಪಷ್ಟ. ಧಾರ್ಮಿಕ ಪರ್ದಾಗಳನ್ನು ಮೊದಲು ಬಳಸುತ್ತಿದ್ದವರು ಕ್ಯಾಥೋಲಿಕ್ ಸನ್ಯಾಸಿನಿಯರು (ನನ್ಸ್) ಮತ್ತು ಮೋರ್ಮ್‌ನ್ನಗಳು. ಇದರಲ್ಲೂ ಮೋರ್ಮನ್ನಗಳು ಧಾರ್ಮಿಕ ಆಚರಣೆಗಳು ಮತ್ತು ಕ್ರಿಯಾವಿಧಿಗಳ(ರಿಚುಯಲ್ಸ್) ಸಮಯದಲ್ಲಿ ಮಾತ್ರ ಈ ಪರ್ದಾಗಳನ್ನು ಹಾಕಿಕೊಳ್ಳುತ್ತಿದ್ದರು. ವಿಚಿತ್ರವೆಂದರೆ, ಮುಸ್ಲಿಂ ಮಹಿಳೆಯರು ಹಾಕಿಕೊಳ್ಳುವ ಪರ್ದಾವನ್ನು ಕೇವಲ ಧಾರ್ಮಿಕ ಆಚರಣೆಗೆ ಮಾತ್ರ ಮೀಸಲಿಟ್ಟಿಲ್ಲ. ಬದಲಿಗೆ, ಅವರ ಇಡೀ ನಿತ್ಯ ಜೀವನವನ್ನೇ ಅದು ಆಕ್ರಮಿಸಿಕೊಂಡಿದೆ. ಇದು ನಿಜವಾಗಿಯೂ ಧರ್ಮಕ್ಕೇ ವಿರುದ್ಧ! ಕೆಲ ತಿಂಗಳ ಹಿಂದೆ ಬುರ್ಖಾ ಕುರಿತ ವಿವಾದ ತಾರಕಕ್ಕೇರಿದಾಗ ಶಬಾನಾ ಅಜ್ಮಿ ಈ ಬಗ್ಗೆ ಮಾತನಾಡುತ್ತಾ, 'ಬುರ್ಖಾ ಹಾಕಿಕೊಳ್ಳುವುದರ ಬಗ್ಗೆ ಕುರಾನ್‌ನಲ್ಲಿ ಏನನ್ನೂ ಹೇಳಿಲ್ಲ' ಎಂದರು. ಆದರೆ ಶಬಾನಾ, ಕುರಾನ್ ಗ್ರಂಥವನ್ನು ತಪ್ಪಾಗಿ ತಿಳಿದುಕೊಂಡಿದ್ದಾರೆ. ವಾಸ್ತವವಾಗಿ ಬುರ್ಖಾ ಬಗ್ಗೆ ಕುರಾನ್‌ನಲ್ಲೇ ಕೆಲವು ಪ್ರಸ್ತಾಪಗಳಿವೆ. ಅವೇನೆಂದು ನಾವಿಲ್ಲಿ ನೋಡಬಹುದು-

- ಮಹಿಳೆಯರು ಯಾವಾಗಲೂ ಕತ್ತು ಬಗ್ಗಿಸಿಕೊಂಡು ತಮ್ಮ ದೃಷ್ಟಿಯನ್ನು ನೆಲದ ಕಡೆಗೆ ನೆಟ್ಟಿರಬೇಕು ಮತ್ತು ಲೈಗಿಂಕ ಅಂಗಾಂಗಗಳನ್ನು ಮುಚ್ಚಿಕೊಂಡಿರಬೇಕು. ಅವರು ತಮ್ಮ ಚೆಲುವನ್ನು ಮತ್ತು ಒಡವೆ-ವಸ್ತ್ರಗಳನ್ನು ಎಲ್ಲರಿಗೂ ಕಾಣವಂತೆ ಪ್ರದರ್ಶಿಸಬಾರದು. ಅವರು ತಮ್ಮ ಸ್ತನಗಳನ್ನು ಪರ್ದಾದ ಹಿಂದೆ ಮುಚ್ಚಿಕೊಂಡಿರಬೇಕು. ಮಹಿಳೆಯರು ತಮ್ಮ ಗಂಡಂದಿರು, ಅಣ್ಣ-ತಮ್ಮಂದಿರು, ಸೋದರ ಸಂಬಂಧಿಗಳು, ಸೇವಕಿಯರು, ಆಳುಗಳು, ಮಕ್ಕಳು ಮತ್ತು ನಪುಂಸಕ ಕೆಲಸಗಾರರನ್ನು ಬಿಟ್ಟರೆ ಬೇರಾರಿಗೂ ತಮ್ಮ ಸೌಂದರ್ಯವನ್ನು ತೋರಿಸಬಾರದು. ನಡೆಯುವಾಗಲೂ ತೀರಾ ವೇಗವಾಗಿ ಹೆಜ್ಜೆ ಹಾಕಬಾರದು. ಏಕೆಂದರೆ, ಬಿಡುಬೀಸಾಗಿ ನಡೆಯುವುದರಿಂದ ಅವರ ದೇಹದ ಬಹುಭಾಗ ಇತರರ ಕಣ್ಣಿಗೆ ಕಾಣುತ್ತದೆ. (ಸುರಾ ಅಲ್ ನೂರ್ ೨೪:೩೧)

- ನೀವು ನಿಮ್ಮ ಹೆಂಡತಿಯರು ಮತ್ತು ಹೆಣ್ಣುಮಕ್ಕಳಿಗೆ ಹಾಗೂ ವಿಶ್ವಾಸಾರ್ಹ ಹೆಂಗಸರಿಗೆಲ್ಲ, ಇಡೀ ದೇಹವನ್ನು ಮುಚ್ಚುವಂಥ ಬಟ್ಟೆಯನ್ನು (ಬುರ್ಖಾ) ಹಾಕಿಕೊಳ್ಳಬೇಕೆಂದು ಹೇಳಿರಿ. ಹೀಗೆ ಬುರ್ಖಾ ಹಾಕಿಕೊಂಡುಬಿಟ್ಟರೆ ಅವರನ್ನು ಯಾರೂ ಪತ್ತೆ ಹಚ್ಚಲಾರರು. ಅಂದಮೇಲೆ, ಅವರಿಗೆ ಕಿರುಕುಳ ನೀಡುವ, ದೌರ್ಜನ್ಯ ಎಸಗುವ ಪ್ರಶ್ನೆಯೇ ಇಲ್ಲ. ಅಲ್ಲಾಹುವು ದಯಾಪರನೂ ಕರುಣಾಪೂರ್ಣನೂ ಆಗಿದ್ದಾನೆ. (ಸುರಾ ಅಲ್ ಹಿಜಾಬ್ ೩೩:೫೯).

ಕುರಾನ್ ಅಷ್ಟೇ ಅಲ್ಲ, ಪ್ರವಾದಿ ಮಹಮದ್ ಅವರ ಜೀವನ-ಸಾಧನೆಗಳ ಹಾಗೂ ಅವರು ನಾನಾ ವಿಚಾರಗಳ ಬಗ್ಗೆ ಆಡಿದ ಮಾತುಗಳನ್ನು ಒಳಗೊಂಡಿರುವ 'ಹದಿಸ್'ಗಳಲ್ಲೂ ಕೂಡ ಪರ್ದಾ ಪದ್ಧತಿಯ ಬಗ್ಗೆ ವ್ಯಾಪಕವಾಗಿ ಬರೆಯಲಾಗಿದೆ. ಅಂದಂತೆ, ಈ 'ಹದಿಸ್'ಗಳನ್ನೆಲ್ಲ ಬರೆದಿಟ್ಟಿರುವವರು ಪ್ರವಾದಿ ಮಹಮದ್‌ಗೆ ನಿಕಟವಾಗಿದ್ದವರು. 'ಹದಿಸ್'ಗಳ ಪ್ರಕಾರ ಮುಸ್ಲಿಂ ಮಹಿಳೆಯರು ಮನೆಯ ಹೊಸ್ತಿಲು ದಾಟಿ ಆಚೆಗೆ ಕಾಲಿಡುವಾಗಲೆಲ್ಲ ಇಡೀ ದೇಹವನ್ನು ಪರ್ದಾದಿಂದ ಮುಚ್ಚಿಕೊಂಡಿರಬೇಕು, ಅವರು ಅಪರಿಚಿತ ಪುರುಷರ ಮುಂದೆ ಸುಳಿಯಲೂಬಾರದು, ಮಸೀದಿಗೆ ಹೋಗಿ ನಮಾಜ್ ಮಾಡಬಾರದು ಮತ್ತು ಯಾರ ಅಂತಿಮ ಸಂಸ್ಕಾರದಲ್ಲೂ ಭಾಗವಹಿಸುವಂತಿಲ್ಲ.

ಇಸ್ಲಾಂ ಧರ್ಮದಲ್ಲಿ ಪರ್ದಾ ಪದ್ಧತಿ ಹೇಗೆ ಮತ್ತು ಯಾಕೆ ಶುರುವಾಯಿತು ಎಂಬ ಬಗ್ಗೆಯೇ ಅನೇಕ ಅಭಿಪ್ರಾಯಗಳಿವೆ. ಒಂದು ಅಭಿಪ್ರಾಯದ ಪ್ರಕಾರ, ಪ್ರವಾದಿ ಮಹಮದ್ ತನ್ನ ಮೊದಲ ಪತ್ನಿಯ ಹತ್ತಿರ ಇದ್ದ ದುಡ್ಡು-ದಗ್ಗಾಣಿಯನ್ನೆಲ್ಲ ಖರ್ಚು ಮಾಡಿ, ಬರಿಗೈದಾಸನಾದ. ಆ ಕಾಲದ ಅರೇಬಿಯಾದಲ್ಲಿ ಮನುಷ್ಯನೊಬ್ಬ ದಿವಾಳಿ ಎದ್ದುಹೋದರೆ, ಮರುಭೂಮಿ ಮತ್ತು ಬಟಾಬಯಲಿಗೆ ಹೋಗಿ ಇರಬೇಕಿತ್ತು. ಜತೆಗೆ ಅಲ್ಲೇ ತಮ್ಮ ಲೈಂಗಿಕ ಅಗತ್ಯಗಳನ್ನೂ ಪೂರೈಸಿಕೊಳ್ಳಬೇಕಾಗಿತ್ತು. ಪ್ರವಾದಿಯ ಪತ್ನಿಯರಿಗೂ ಇದನ್ನು ಬಿಟ್ಟರೆ ಬೇರೆ ದಾರಿ ಇರಲಿಲ್ಲ. ಇದರಂತಯೇ, ಪ್ರವಾದಿ ಮಹಮದ್ ಬರಿಗೈದಾಸನಾದ ಮೇಲೆ ತಮ್ಮ ಪತ್ನಿಯರನ್ನೆಲ್ಲ ಕರೆದು, 'ನಿವೆಲ್ಲರೂ ಈ ಮನೆಯಿಂದ ಹೊರಹೋಗಲು ಮತ್ತು ಸಹಜವಾಗಿ ಬದುಕಲು ನಾನು ನಿಮಗೆ ಒಪ್ಪಿಗೆ ಕೊಟ್ಟಿದ್ದೇನೆ' ಎಂದರು (ಬುಖಾರಿ ಹದಿಸ್, ಮೊದಲನೇ ಸಂಪುಟ). ಇದಕ್ಕೆ ಅನುಸಾರವಾಗಿ ಪ್ರವಾದಿಯ ಪತ್ನಿಯರು ಬದುಕಲು ಶುರು ಮಾಡಿದರು. ಹೀಗಿರುವಾಗ ಪ್ರವಾದಿಯ ಶಿಷ್ಯನಾಗಿದ್ದ ಉಮಾನ್ ಒಂದು ದಿನ, 'ಪ್ರವಾದಿಗಳೇ ಮರುಭೂಮಿ ಮತ್ತು ಬಟಾಬಯಲಿನಲ್ಲಿರುವ ನಿಮ್ಮ ಪತ್ನಿಯರು ದಣಿವಾರಿಸಿಕೊಳ್ಳಲೆಂದು ಕೂತಿದ್ದಾಗ ಎಲ್ಲರ ಕಣ್ಣಿಗೂ ಬೀಳುತ್ತಿದ್ದಾರೆ. ಇದರಿಂದಾಗಿ ಅವರಿಗೆಲ್ಲ ಕಿರಿಕಿರಿಯಾಗುತ್ತಿದೆ' ಎಂದು ದೂರು ಹೇಳಿದ. ಈ ಹಂತದಲ್ಲೇ ಆತ, ಪ್ರವಾದಿಯ ಪತ್ನಿಯರ ದೇಹವನ್ನೆಲ್ಲ ಮುಚ್ಚುವಂಥ ಒಂದು ವಸ್ತ್ರವನ್ನು ಸೂಚಿಸಿದ. ಆದರೆ ಪ್ರವಾದಿ ಮಹಮದ್ ಅದನ್ನು ಒಪ್ಪಲಿಲ್ಲ. ವಿಚಿತ್ರವೆಂದರೆ, ಈ ವಿಷಯದ ಬಗ್ಗೆ ಪ್ರವಾದಿ ಮಹಮದ್ ಮುಂದಿನ ಕ್ಷಣದಲ್ಲಿ ಅಲ್ಲಾಹುವಿನ ಸಲಹೆ ಕೇಳದರು. ಅಲ್ಲಾಹು ಇದಕ್ಕೆ ಒಪ್ಪಿಗೆ ನೀಡಿದ. ಇದರ ಪ್ರಕಾರ, ಪ್ರವಾದಿ ಮಹಮದ್ ಇಂಥ ವಸ್ತ್ರವನ್ನು ರೂಢಿಗೆ ತಂದರು.(ಬುಖಾರಿ ಹದಿಸ್) ಹದಿಸ್‌ಗಳ ಪ್ರಕಾರ ಇದು ಪರ್ದಾದ ಚರಿತ್ರೆ. ಆದರೆ ಇಲ್ಲೊಂದು ಪ್ರಶ್ನೆ ಇದೆ. ಅರಬ್ ಮಹಿಳೆಯರಂತೆಯೇ ಗಂಡಸರೂ ಸಹ ದಿವಾಳಿಯೆದ್ದ ನಂತರ ಮರುಭೂಮಿ ಮತ್ತು ಬಟಾಬಯಲುಗಳಲ್ಲೇ ಇರುತ್ತಿದ್ದರು. ಹಾಗಾದರೆ, ಅಲ್ಲಾಹು ಅವರಿಗೂ ಪರ್ದಾ ಹಾಕಬೇಕಿತ್ತು ತಾನೇ? ಆದರೆ, ಸರ್ವಶಕ್ತನೆಂದು ಕರೆಯಲಾಗುವ ಆ ಅಲ್ಲಾಹು ಹಾಗೇಕೆ ಮಾಡಲಿಲ್ಲ? ಇದರಿಂದ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಅಂದರೆ, ಆ ಅಲ್ಲಾಹು ಗಂಡಸರು ಮತ್ತು ಹೆಂಗಸರನ್ನು ಸಮನಾಗಿ ಕಾಣಲಿಲ್ಲ! ಅವನೇನಾದರೂ ಇಬ್ಬರನ್ನೂ

ಸರಿಸಮನಾಗಿ ನೋಡಿದ್ದರೆ ಗಂಡಸರಿಗೂ ಪರ್ದಾ ಇರಬೇಕಿತ್ತು. ಈಗ ಏನಾಗಿದೆ ಎಂದರೆ, ಹೆಂಗಸರಿಗಿಂತ ಗಂಡಸು ಮೇಲು ಎಂದಾಗಿದ್ದಾನೆ. ಇಷ್ಟೇ ಅಲ್ಲ, ಹೆಂಗಸರು ಸಂಕೋಲೆಗಳ ಮಡುವಿನಲ್ಲಿದ್ದರೆ, ಗಂಡಸು ಮಾತ್ರ ಸ್ವಚ್ಛಂದ ಹಕ್ಕಿಯಂತಿದ್ದಾನೆ. ಇದು ಮುಸ್ಲೀಂ ಜಗತ್ತಿನ ಕಠೋರ ವಾಸ್ತವ.

ಇನ್ನೊಂದು ಕತೆಯ ಪ್ರಕಾರ, ಹೆಂಗಸರನ್ನು ಆಳುಕಾಳುಗಳಿಂದ ಪ್ರತ್ಯೇಕವಾಗಿ ಗುರುತಿಸಲು ಪರ್ದಾ ಸಂಪ್ರದಾಯ ಶುರುವಾಯಿತು. ಇದಕ್ಕೆ ಮೂಲ ಯಾವುದೆಂದರೆ, 'ಹದಿಸ್'ಗಳಲ್ಲಿರುವ ಕತೆಗಳು. ಬುಖಾರಿ ಹದಿಸ್‌ನಲ್ಲಿರುವ ಒಂದು ಕತೆ ಹೀಗಿದೆ-ಖೈಬರ್ ಯುದ್ಧದಲ್ಲಿ ವಿಜಯದ ನಗೆ ಚೆಲ್ಲಿದ ಪ್ರವಾದಿ ಮಹಮದ್, ಶತ್ರು ಪಾಳೆಯದ ಮಹಿಳೆಯರೂ ಸೇರಿದಂತೆ ಸಕಲವನ್ನೂ ಕೊಳ್ಳೆ ಹೊಡೆದರು. ಹೀಗೆ ಪ್ರವಾದಿಯ ಕೈವಶವಾದ ಮಹಿಳೆಯರಲ್ಲಿ ಒಬ್ಬಾಕೆಯ ಹೆಸರು ಸೋಫಿಯಾ. ತಮ್ಮ ವಶವಾದ ಸೋಫಿಯಾಳ ಸ್ಥಾನಮಾನ ಏನೆಂದು ಪ್ರವಾದಿಯ ಶಿಷ್ಯನೊಬ್ಬ ಕೇಳಿದ. ಆಗ ಪ್ರವಾದಿ ಮಹಮದ್, 'ನಾಳೆ ಬೆಳಗ್ಗೆ ಸೋಫಿಯಾ ಏನಾದರೂ ಪರ್ದಾ ಸಹಿತ ಇದ್ದರೆ ಆಕೆ ನನ್ನ ಹೆಂಡತಿಯಾಗಲಿದ್ದಾಳೆ ಎಂದರ್ಥ. ಅಕಸ್ಮಾತ್ ಏನಾದರೂ ಪರ್ದಾ ಹಾಕಿಕೊಂಡಿಲ್ಲದೆ ಇದ್ದರೆ ಅವಳು ನನ್ನ ಸೇವಕಿಯಾಗಿರುತ್ತಾಳೆ ಅಷ್ಟೇ' ಎಂದು ಉತ್ತರ ಕೊಟ್ಟರಂತೆ.

ಪರ್ದಾ ಹುಟ್ಟಿದ್ದರ ಬಗ್ಗೆ ಮೂರನೆಯ ಕತೆಯೂ ಒಂದಿದೆ. ಇದರ ಪ್ರಕಾರ ಪ್ರವಾದಿ ಮಹಮದ್‌ರ ಪತ್ನಿಯರ ಪೈಕಿ ಒಬ್ಬಳಾದ ಅಯೇಷಾ ಚೆಂದುಳ್ಳಿ ಚೆಲುವೆ. ತಮ್ಮಲ್ಲಿಗೆ ಬಂದುಹೋಗುತ್ತಿದ್ದ ಸ್ನೇಹಿತರೆಲ್ಲ ಈಕೆಯ ಮೇಲೆ ಆಸೆಗಣ್ಣು ಬೀರುತ್ತಿದ್ದುದನ್ನು ಕಂಡು ಪ್ರವಾದಿ ಮಹಮದ್‌ಗೆ ಕಿರಿಕಿರಿಯಾಯಿತು. ನಂತರ ಅವರೇ ಕುರಾನ್‌ನಲ್ಲಿ 'ಪ್ರವಾದಿಯ ಗೆಳೆಯರೇ, ನಿಮ್ಮ ಸ್ನೇಹಿತರ ಮನೆಗೆ ಹೋದರೂ ನಿಮ್ಮ ಗೆಳೆಯರ ಪತ್ನಿಯ ಬಳಿ ಹೋಗಿ ಏನನ್ನೂ ಕೇಳಬೇಡಿ' ಎಂದರು! ಈ ಕತೆಯನ್ನು ನಂಬುವುದಾದರೆ, ತಮ್ಮ ಪತ್ನಿಯರ ಮೇಲೆಯೇ ಕಣ್ಣುಹಾಕುವ ಗೆಳೆಯರು ಮತ್ತು ಶಿಷ್ಯರನ್ನು ಅಂಕೆಯಲ್ಲಿಡಲು ಪರ್ದಾಪದ್ಧತಿ ಜಾರಿಗೆ ಬಂತು ಎಂದುಕೊಳ್ಳಬೇಕು. ಒಟ್ಟಿನಲ್ಲಿ ಪದಾ ಪದ್ಧತಿ ಮೊದಲಿಗೆ ಪುಣ್ಯಾತ್ಮರ (ಹೋಲಿ ಮೆನ್) ಪತ್ನಿಯರ ರಕ್ಷಣೆಯ ಸಲುವಾಗಿ ಬಂತು. ಆದರೆ ಆಮೇಲಾಮೇಲೆ ಎಲ್ಲಾ ಮುಸ್ಲಿಂ ಹೆಂಗಸರ ಪಾಲಿಗೂ ಕಡ್ಡಾಯವಾಯಿತು. ಇದೇನೇ ಇರಲಿ ಪರ್ದಾ ಅಂದರೆ ಕಣ್ಣು ಮುಂಗೈ ಮತ್ತು ಪಾದಗಳನ್ನು ಬಿಟ್ಟು ಮುಸ್ಲಿಂ ಮಹಿಳೆಯರ ಇಡೀ ದೇಹವನ್ನೆಲ್ಲ ಆವರಿಸಿಕೊಳ್ಳುವ ಒಂದು ವಸ್ತ್ರ. ಆದರೆ ಈಗ ಕೆಲವು ಮಹಿಳೆಯರು ಈ ಪರ್ದಾವನ್ನು ಕೇವಲ ತಮ್ಮ ತಲೆಗೂದಲನ್ನು ಮಾತ್ರ ಮುಚ್ಚಿಕೊಳ್ಳಲು ಬಳಸುತ್ತಾರೆ. ಆದರೆ, ಪರ್ದಾವನ್ನು ಹೀಗೂ ಬಳಸಬಹುದೆಂದು ಕುರಾನ್‌ನಲ್ಲಿ ಎಲ್ಲೂ ಹೇಳಿಲ್ಲ. ನಿಜ ಹೇಳಬೇಕೆಂದರೆ, ಇಸ್ಲಾಮಿಕ್ ಪರ್ದಾದಿಂದ ತಲೆಗೂದಲನ್ನು ಮಾತ್ರ ರಕ್ಷಿಸಿಕೊಳ್ಳುವಂತೆಯೇ ಇಲ್ಲ!

ಇಸ್ಲಾಂ ಧರ್ಮದ ಆರಂಭಿಕ ಕಾಲಘಟ್ಟದಲ್ಲಿ ಪ್ರವಾದಿ ಮಹಮದ್, ಮಹಿಳೆಯರ ಪಾದಗಳು ಇತರರ ಕಣ್ಣಿಗೆ ಬೀಳದಿರಲಿ ಎಂಬ ಉದ್ದೇಶದಿಂದ ಇಂಥದೊಂದು ವಸ್ತ್ರವನ್ನು ಹಾಕಬೇಕೆಂದು ಸೂಚಿಸಿದರು. ಆದರೆ, ಅವರು ಸತ್ತು ೧೦೦ ವರ್ಷವಾಗುವಷ್ಟರಲ್ಲಿ ಈ ಪರ್ದಾ ಪದ್ಧತಿ ಇಡೀ ಮಧ್ಯಪ್ರಾಚ್ಯವನ್ನೆಲ್ಲಾ

ಆಕ್ರಮಿಸಿಕೊಂಡಿತು. ಅದರಲ್ಲೂ, ಮಹಿಳೆಯರಿಗೆ ಒಂದು ಸಾದಾ ಪರ್ದಾ ಸಾಲದೆಂದು ಅದರ ಮೇಲೆ ಇನ್ನೊಂದು ಹೊದಿಕೆ ಹೇರಲು ಶುರು ಮಾಡಿದರು. ಇದಾದ ಮೇಲೆ ಮುಸ್ಲಿಂ ಮಹಿಳೆಯರು ಮನೆಯಿಂದ ಆಚೆಗೆ ಕಾಲಿಡುವಂತಿಲ್ಲ ಮತ್ತು ಅಪರಿಚಿತ ಪುರುಷರ ಮುಂದೆ ಸುಳಿಯುವಂತೆಯೂ ಇಲ್ಲ ಎಂಬ ನಿರ್ಬಂಧಗಳನ್ನು ಹೇರಿದರು. ಹೀಗಾಗಿ ಮುಸ್ಲಿಂ ಮಹಿಳೆಯರ ಜೀವನವೆಲ್ಲ ಮನೆಯಲ್ಲಿ ಇದ್ದುಕೊಂಡು ಅಡುಗೆ ಮಾಡುವುದು, ಮುಸುರೆ ತಿಕ್ಕುವುದು, ಕಸಗುಡಿಸುವುದು, ಮಕ್ಕಳನ್ನು ಹೆತ್ತು ಅವರನ್ನೆಲ್ಲ ಬೆಳೆಸುವುದಕ್ಕೇ ಸೀಮಿತವಾಯಿತು. ಹೀಗೆ, ಯಕಶ್ಚಿತ್ ಎನಿಸುವಂಥ ಒಂದು ಪರ್ದಾವನ್ನು ಹಿಡಿದುಕೊಂಡು ಸಮಾಜದ ಒಂದು ವರ್ಗವನ್ನೇ–ಅಂದರೆ ಮಹಿಳೆಯರನ್ನು–ಮೂಲೆಗುಂಪು ಮಾಡಲಾಯಿತು.

ನಿಜಕ್ಕೂ ಮಹಿಳೆಯರಿಗೇಕೆ ಪರ್ದಾ ಹಾಕಲಾಗುತ್ತದೆ? ಯಾಕೆಂದರೆ, ಮಹಿಳೆಯರೆಂದರೆ ಕೇವಲ ಭೋಗ ಸಾಮಾಗ್ರಿ! ಅಂದರೆ ಮಹಿಳೆಯರನ್ನು ಕಂಡರೆ ಸಾಕು, ಗಂಡಸರಿಗೆ ಕಾಮ ಭುಗಿಲೇಳುತ್ತದೆ ಎಂದರ್ಥ. ವಾಸ್ತವವಾಗಿ ಇದು ಗಂಡಸರ ತಪ್ಪು. ಆದರೆ ಗಂಡಸರ ಲೈಂಗಿಕ ಸಮಸ್ಯೆಗಳಿಗೆ ಮಹಿಳೆಯರನ್ನೇಕೆ ಹೀಗೆ ಶಿಕ್ಷಿಸಬೇಕು? ಹಾಗೆ ನೋಡಿದರೆ, ಮಹಿಳೆಯರಿಗೂ ಲೈಂಗಿಕ ಬಯಕೆಗಳಿವೆ. ಅಂದಮೇಲೆ, ಗಂಡಸರೂ ಸಹ ತಮ್ಮ ಲೈಂಗಿಕ ಅಂಗಾಂಗಗಳು ಮಹಿಳೆಯರ ಕಣ್ಣಿಗೆ ಬೀಳದಂತೆ ಪರ್ದಾದಂಥ ವಸ್ತ್ರವನ್ನು ಹಾಕಿಕೊಳ್ಳಬೇಕು. ಆದರೆ ಹಾಗೇನೂ ಇಲ್ಲ ಎನ್ನವುದು ನಿಜ. ಗಂಡಸರು ಹುಟ್ಟುಹಾಕಿರುವ ಎಲ್ಲ ಧರ್ಮಗಳ ಅವಸ್ಥೆಯೂ ಇದೇ. ಅಂದರೆ, ಈ ಧರ್ಮಗಳ ಪೈಕಿ ಒಂದೇ ಒಂದರಲ್ಲೂ ಹೆಂಗಸರಿಗೆ ಅವರದೇ ಆದ ಪ್ರತ್ಯೇಕ ಅಸ್ತಿತ್ವವಿಲ್ಲ. ಇಷ್ಟೇ ಅಲ್ಲ, ಮಹಿಳೆಯರನ್ನು ಯಾವ ಧರ್ಮದಲ್ಲೂ ಮಹಿಳೆಯರು ಕೂಡ ತಮ್ಮದೇ ಆದ ಆಸೆ ಮತ್ತು ಅಸ್ತಿತ್ವ ಹೊಂದಿರುವ ಮನುಷ್ಯರೆಂದು ಪರಿಗಣಿಸಿಯೇ ಇಲ್ಲ. ಪರ್ದಾ ಪದ್ಧತಿ ಕೇವಲ ಮಹಿಳೆಯರಿಗೆ ಮಾತ್ರ ಅವಮಾನ ಮಾಡುತ್ತಿಲ್ಲ. ವಾಸ್ತವವಾಗಿ ಅದು ಗಂಡಸರನ್ನೂ ಹೀಗಳೆಯುತ್ತದೆ. ಏಕೆಂದರೆ, ಪರ್ದಾ ಹಾಕಿಕೊಳ್ಳದೆ ಇರುವ ಮಹಿಳೆಯರ ಮೇಲೆ ಗಂಡಸರು ಆಸೆಯ ಕಣ್ಣು ಹಾಕುತ್ತಾರೆ, ಎರಗಿಬೀಳುತ್ತಾರೆ, ಅತ್ಯಾಚಾರ ಮಾಡುತ್ತಾರೆ ಎಂದೆಲ್ಲ ಪರ್ದಾವನ್ನು ಸಮರ್ಥಿಸಿಕೊಳ್ಳಲಾಗುತ್ತಿದೆ. ಹಾಗಾದರೆ, ಬುರ್ಖಾ ಹಾಕಿಕೊಳ್ಳದೆ ಇರುವ ಮಹಿಳೆಯರನ್ನು ಕಂಡ ಮಾತ್ರಕ್ಕೆ ಗಂಡಸರೆಲ್ಲ ತಮ್ಮ ಪ್ರಜ್ಞೆಯನ್ನು ಕಳೆದುಕೊಂಡು ಬಿಡುತ್ತಾರೇನು?

ಕುರಾನ್‌ನಲ್ಲಿ ಪರ್ದಾ/ ಬುರ್ಖಾ ಬಗ್ಗೆ ಏನನ್ನೂ ಹೇಳಿಲ್ಲ ಎನ್ನುವ ಶಬಾನಾ ಆಜ್ಮಿ ಮತ್ತು ಅವರಂಥ ಇತರರಿಗೆ ನನ್ನದು ಒಂದೇ ಪ್ರಶ್ನೆ. ಒಂದು ವೇಳೆ ಕುರಾನ್‌ನಲ್ಲೇನಾದರೂ ಮುಸ್ಲಿಂ ಮಹಿಳೆಯರೆಲ್ಲ ಪರ್ದಾ ಹಾಕಿಕೊಳ್ಳಬೇಕೆಂದು ಹೇಳಿದ್ದರೆ ಇವರೆಲ್ಲ ಅದನ್ನು ಪಾಲಿಸುತ್ತಿದ್ದರೇ? ಈ ಪ್ರಶ್ನೆಗೆ ನನ್ನ ಉತ್ತರ 'ಬಿಲ್‌ಕುಲ್ ಇಲ್ಲ' ಎನ್ನುವುದಷ್ಟೆ. ಬುರ್ಖಾ ಹಾಕಿಕೊಳ್ಳಬೇಕೆಂದರೆ ಯಾವ ಪುಸ್ತಕವಾದರೂ ಹೇಳಿರಲಿ, ಯಾವುದೇ ಪ್ರವಾದಿಯಾದರೂ ಹೇಳಿರಲಿ, ಬೇರೆ ಯಾರೇ ಆದರೂ ಆಜ್ಞೆ ಹೊರಡಿಸಿರಲಿ–ಮಹಿಳೆಯರು ಬುರ್ಖಾ ಹಾಕಿಕೊಳ್ಳಬಾರದು! ಇಷ್ಟೇ ಅಲ್ಲ, ಮಹಿಳೆಯರು ದಾವಣಿ (ವೇಲ್), ಚಾದರ್, ಹಿಜಲ್, ಬುರ್ಖಾ ಮತ್ತು ಸಿರವಸ್ತ್ರ

(ಹೆಡ್‌ಸ್ಕಾರ್ಫ್) ಯಾವುದನ್ನೂ ಹಾಕಿಕೊಳ್ಳಬಾರದು. ಏಕೆಂದರೆ, ಇವೆಲ್ಲವೂ ಮಹಿಳೆಯರಿಗೇ ಅಗೌರವ ತೋರಿಸುತ್ತಿರುವಂಥ ವಸ್ತುಗಳು. ಇಷ್ಟೇ ಅಲ್ಲ, ಇವೆಲ್ಲವೂ ಮಹಿಳಾ ಶೋಷಣೆಯ ಸಂಕೇತಗಳು. ಇವುಗಳ ಮೂಲಕ 'ಹೆಂಗಸರೆಲ್ಲ ಗಂಡಸರ ತೊತ್ತುಗಳು. ಆದ್ದರಿಂದ ಗಂಡಸರು, ಹೆಂಗಸರನ್ನು ತಮಗೆ ಬೇಕಾದಂತೆ ಬಳಸಿಕೊಳ್ಳಬಹುದು' ಎಂದು ಹೇಳಕೊಳ್ಳುತ್ತಲೇ ಸಾವಿರಾರು ವರ್ಷಗಳನ್ನು ಕಳೆದಿದ್ದು, ಇಂಥ ಅಮಾನವೀಯ ಕಟ್ಟಳೆಗಳನ್ನೆಲ್ಲ ಮಹಿಳೆಯರ ಮೇಲೆ ಹೇರಲಾಗಿದೆ. ಮುಸ್ಲಿಂ ಮಹಿಳೆಯರನ್ನು ಜಡವಾಗಿ ಮತ್ತು ದೈನ್ಯವಾಗಿ ಇಡಲೆಂದೇ ಬುರ್ಖಾದಂಥ ತಂತ್ರಗಳನ್ನು ತರಲಾಗಿದೆ. ಬುರ್ಖಾದಿಂದಾಗಿ ಏನಾಗಿದೆ ಎಂದರೆ ಮಹಿಳೆಯರು ತಮ್ಮ ಆತ್ಮಾಭಿಮಾನ, ಗೌರವ, ಆತ್ಮವಿಶ್ವಾಸ, ತಮ್ಮದೇ ಆದ ಸ್ವಂತ ಅಸ್ತಿತ್ವ, ಸ್ವಂತ ನಿಲುವುಗಳು ಮತ್ತು ತಮ್ಮದೇ ಆದ ಆದರ್ಶಗಳನ್ನೆಲ್ಲ ಕಳೆದುಕೊಂಡಿದ್ದಾರೆ. ಹೀಗಾಗಿ ಮುಸ್ಲಿಂ ಮಹಿಳೆಯರಲ್ಲಿ ಯಾರೊಬ್ಬರಿಗೂ ತಮ್ಮ ಕಾಲಿನ ಮೇಲೆ ನಿಲ್ಲುವ ಶಕ್ತಿ, ತಲೆ ಎತ್ತಿ ಓಡಾಡುವ ಚೈತನ್ಯ, ಬೆನ್ನುಮೂಳೆಯನ್ನು ನೆಟ್ಟಗೆ ಮಾಡಿಕೊಳ್ಳುವ ಜೀವನೋತ್ಸಾಹ ಯಾವುದೂ ಇಲ್ಲ. ೧೫೦೦ ವರ್ಷಗಳ ಹಿಂದೆ ಯಾವನೋ ಒಬ್ಬನ ವೈಯಕ್ತಿಕ ಕಾರಣಕ್ಕಾಗಿ ಮುಸ್ಲಿಂ ಮಹಿಳೆಯರೆಲ್ಲ ಬುರ್ಖಾ ಧರಿಸಬೇಕೆಂಬ ಫರ್ಮಾನು ಹೊರಬಿತ್ತು. ಇದರಿಂದಾಗಿ ಪ್ರಪಂಚದ ಎಲ್ಲೆಡೆ ಕೋಟ್ಯಂತರ ಮುಸ್ಲಿಂ ಮಹಿಳೆಯರು ನರಳಬೇಕಾಗಿ ಬಂದಿದೆ. ಜಗತ್ತಿನ ಚರಿತ್ರೆಯಲ್ಲಿ ನೂರಾರು ಸಂಪ್ರದಾಯಗಳೆಲ್ಲ ಇಂದು ಹೇಳಹೆಸರಿಲ್ಲದಂತಾಗಿ, ಸಹಜ ಅಂತ್ಯ ಕಂಡಿವೆ. ಆದರೆ ಬುರ್ಖಾಗೆ ಮಾತ್ರ ಈ ಗತಿ ಬಂದೊದಗಿಲ್ಲ. ಬದಲಿಗೆ, ಈ ಕೇಡಿಗ ಸಂಪ್ರದಾಯವನ್ನು ಪುನರುಜ್ಜೀವನಗೊಳಿಸುವ ಹಾಗೂ ಮತ್ತಷ್ಟು ವ್ಯಾಪಕಗೊಳಿಸುವಂತಹ ಹುಚ್ಚು ಪ್ರಯತ್ನಗಳು ಸಾಕಷ್ಟು ಸಂಖ್ಯೆಯಲ್ಲಿ ನಡೆಯುತ್ತಲೇ ಇವೆ. ಮಹಿಳೆಯ ತಲೆಯನ್ನು ಬುರ್ಖಾದಿಂದ ಮುಚ್ಚುವುದೆಂದರೆ ಆಕೆಯ ಮಿದುಳನ್ನೇ ಮುಚ್ಚಿ ಅದು ಕೆಲಸ ಮಾಡದಂತೆ ನೋಡಿಕೊಳ್ಳುವುದು ಎಂದೇ ಅರ್ಥ. ನಿಜವಾಗಿಯೂ ಮುಸ್ಲಿಂ ಮಹಿಳೆಯರ ಮಿದುಳು ಕೆಲಸ ಮಾಡುತ್ತಿದ್ದಿದ್ದರೆ ಅವರು ಹೀಗೆ ಧರ್ಮದ ನೆಪ ಮುಂದಿಟ್ಟು ತಮಗೆ ತೊಡಿಸಿದ ದಾವಣಿ/ಬುರ್ಖಾಗಳನ್ನೆಲ್ಲ ಯಾವತ್ತೋ ಕಿತ್ತೆಸೆಯುತ್ತಿದ್ದರು.

ಹಾಗಾದರೆ ಈ ಮಹಿಳೆಯರು ಜರೂರಾಗಿ ಏನು ಮಾಡಬೇಕು? ಅವರು ಇಂಥ ತಾರತಮ್ಯವನ್ನು ಖಂಡತುಂಡವಾಗಿ ಪ್ರತಿಭಟಿಸಬೇಕು. ಸಾವಿರಾರು ವರ್ಷಗಳಿಂದ ತಮಗಾಗಿರುವ ಅಪಚಾರಗಳ ವಿರುದ್ಧ ಇವರೆಲ್ಲ ನಿಜಕ್ಕೂ ಯುದ್ಧ ಸಾರಬೇಕು. ಗಂಡಸರ ಕಪಿಮುಷ್ಟಿಯಲ್ಲಿರುವ ತಮ್ಮ ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಮುಸ್ಲಿಂ ಮಹಿಳೆಯರು ಮತ್ತೆ ತಮ್ಮ ವಶ ಮಾಡಿಕೊಳ್ಳಬೇಕು. ಕೊನೆಯದಾಗಿ ಹೇಳುವುದಾದರೆ, ತಾರತಮ್ಯದ ಮೂಲವಾಗಿರುವ ಈ ಬಟ್ಟೆ ತುಂಡನ್ನು (ಬುರ್ಖಾ) ಮುಸ್ಲಿಂ ಮಹಿಳೆಯರು ಕಿತ್ತೆಸೆದು, ಅದನ್ನು ಬೆಂಕಿ ಹಚ್ಚಿ ಸುಟ್ಟುಹಾಕಬೇಕು. ಇಲ್ಲದಿದ್ದರೆ ಮುಸ್ಲಿಂ ಮಹಿಳೆಯರಿಗೆ ಉಳಿಗಾಲ ಎಂಬುದೇ ಇಲ್ಲ.

(ಸಾಭಾರ : ಸಂಚಯ: ಕನ್ನಡಕ್ಕೆ : ಬಿ.ಎಸ್.ಜಯಪ್ರಕಾಶ ನಾರಾಯಣ)

* * *

ಪುಸ್ತಕ ಪರಿಚಯ

ಪುಸ್ತಕದ ಹೆಸರು : **ಮನ ತುಂಬಿದವರು**
ಲೇಖಕರ ಹೆಸರು : ಡಾ. ಅರ್ಜುನಪುರಿ ಅಪ್ಪಾಜಿಗೌಡ
ಪ್ರಕಾಶಕರು : ಶ್ರೀ ಸಿದ್ಧಾರೂಢ ಪ್ರಕಾಶನ
ಕೆಂಗಲ್ ಹನುಮಂತಯ್ಯ ಬಡಾವಣೆ,
ಮದ್ದೂರು-೫೭೧೪೨೮
ಬೆಲೆ ರೂ : ೧೫೦ ಪುಟಗಳು : ೧೫೬

ಮನುಷ್ಯ ಸುಂದರವಾದ ಪರಿಸರದ ಮಧ್ಯೆ ಬೆಳೆಯುವಂತೆ ಆನೇಕ ಸಾತ್ವಿಕ ಮನುಷ್ಯರ ಮಧ್ಯೆಯೂ ಬೆಳೆಯುತ್ತಾನೆ. ಪರಿಸರ ಮತ್ತು ಮನುಷ್ಯರ ಒಡನಾಟ ಪ್ರತಿಯೊಬ್ಬ ವ್ಯಕ್ತಿಯ ಮೇಲೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರಭಾವ ಬೀರುತ್ತವೆ. ಸುತ್ತಲೂ ಇರುವಂಥ ಒಳ್ಳೆಯ ವ್ಯಕ್ತಿಗಳನ್ನು ಗುರುತಿಸುವುದಕ್ಕೆ ವಿಶೇಷವಾದ ದೃಷ್ಟಿ ಮತ್ತು ಮನೋ ಧರ್ಮ ಬೇಕಾಗುತ್ತದೆ. ಹಸುವನ್ನು ಮೇಯಿಸುವವರೆಲ್ಲ ಹಸು ಮಕ್ಕಳಲ್ಲವೆಂದು ಡಿ.ವಿ.ಜಿ. ಹೇಳಿದ್ದಾರೆ. ಇಂದಿನ ಸಂಕೀರ್ಣ ಸಮಾಜದಲ್ಲಿ ಒಳ್ಳೆಯ ವ್ಯಕ್ತಿಗಳನ್ನು ಗುರುತಿಸಿ ಅವರನ್ನು ಸಮಾಜಕ್ಕೆ ಪರಿಚಯಿಸುವ ಕೆಲಸ ತುಂಬ ಅಗತ್ಯವಾದುದು ಮತ್ತು ಸಾರ್ಥಕವಾದುದು. ಸಮಾಜೋನ್ನತಿಯ ಪುಸ್ತಕವನ್ನು ಡಾ.ಅರ್ಜುನಪುರಿ ಅಪ್ಪಾಜಿಗೌಡರು ಬರೆದು ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಅವರ "ಮನ ತುಂಬಿದವರು" ಪುಸ್ತಕದಲ್ಲಿ ಇಪ್ಪತ್ತು ವಿಶೇಷ ವ್ಯಕ್ತಿಗಳ ಪರಿಚಯ ಮಾಡಿಕೊಟ್ಟಿದ್ದಾರೆ. ವಿದ್ಯಾರ್ಥಿಗಳಿಗೆ ಮತ್ತು ಯುವಕರಿಗೆ ಉಪಯೋಗವಾಗುವಂಥ ಪುಸ್ತಕ ಇದಾಗಿದೆ.

* * *

ಪುಸ್ತಕದ ಹೆಸರು : **ಅಪರಾಧ ತನಿಖೆ**
ಲೇಖಕರ ಹೆಸರು : ಕಂಭಂ ಕೃಷ್ಣಮೂರ್ತಿ
ಪ್ರಕಾಶಕರು : ನಿರ್ಮಾಣ ಶೆಲ್ಟರ್ಸ್ (ಬೆಂ) ಪ್ರೈ.ಲಿ
ವಿ.ಎಲ್.ಎನ್. ನಿರ್ಮಾಣ ಭವನ
ನಂ.೭೧, ಕೆ.ಆರ್.ರಸ್ತೆ ಬಸವನಗುಡಿ
ಬೆಂಗಳೂರು-೦೪
ಬೆಲೆರೂ : ೮೦
ಪುಟಗಳು: ೧೩೭. ಪ್ರಕಟಣಾವರ್ಷ-೨೦೦೮

ಮನುಷ್ಯ ನಾನಾ ಬಗೆಯಲ್ಲಿ ಅಪರಾಧ ಮಾಡುತ್ತಾನೆ. ನಂತರ ಆ ಅಪರಾಧಗಳನ್ನು ಮುಚ್ಚಿಡಲು ಪ್ರಯತ್ನಿಸುತ್ತಾನೆ. ಅಪರಾಧಗಳನ್ನು ಮಾಡಲು ಅವನು ಎಷ್ಟೇ ಕುಶಲತೆಯನ್ನು ಉಪಯೋಗಿಸಿದ್ದರು. ಮತ್ತು ಎಷ್ಟೇ ಬುದ್ಧಿ ಪೂರ್ವಕವಾಗಿ ಅವುಗಳನ್ನು ಮುಚ್ಚಿಡಲು ಪ್ರಯತ್ನಿಸಿದರೂ. ಪೋಲೀಸರ ತೀಕ್ಷ್ಣ ತನಿಖಾ ಪ್ರಯತ್ನದ ಕಾರಣವಾಗಿ ಸತ್ಯ ಹೊರ ಬಂದು ಅಪರಾಧಿ ಶಿಕ್ಷೆ ಅನುಭವಿಸ ಬೇಕಾಗುತ್ತದೆ. ದಿನಬೆಳಗಾದರೆ ನಡೆಯುವ ಅಪರಾಧಗಳ ಬಗ್ಗೆ ಪೋಲಿಸ್ ಫೈಲ್‌ಗಳಿಂದ ವಿವರಗಳನ್ನು ಪಡೆದು ಅಪರಾಧ ಲೋಕದ

ಮತ್ತು ತನಿಖಾ ಲೋಕದ ಪರಿಚಯವನ್ನು ಲೇಖಕರು ಈ ಪುಸ್ತಕದಲ್ಲಿ ಮಾಡಿ ಕೊಟ್ಟಿದ್ದಾರೆ. ಈ ಪುಸ್ತಕ ಓದಿದ ನಂತರ ಮನವರಿಕೆಯಾಗುತ್ತದೆ. ಅಪರಾಧ ಮನೋವೃತಿಯಿಂದ ಮನುಷ್ಯ ಬಿಡುಗಡೆ ಹೊಂದಿದಷ್ಟು ಕ್ಷೇಮ.

* * *

ಪುಸ್ತಕದ ಹೆಸರು : **ನಾ ಕಂಡ ಕರ್ನಾಟಕ**
ಲೇಖಕರ ಹೆಸರು : ಡಾ.ಕೃಷ್ಣಾನಂದ ಕಾಮತ
ಪ್ರಕಾಶಕರು : ಕರ್ನಾಟಕ ಇತಿಹಾಸ ಸಂಶೋಧನ ಮಂಡಲಿ
ಧಾರವಾಡ-೫೮೦೦೦೧
ಬೆಲೆ ರೂ : ೧೫೦ ಪುಟಗಳು ೨೯೫+೩=೨೯೮
ಪ್ರಕಟಣಾವರ್ಷ : ೨೦೦೮

ಬಹುಮುಖಿ ಪ್ರತಿಭೆಯ ದಿವಂಗತ ಡಾ.ಕೃಷ್ಣಾನಂದ ಕಾಮತ್ ಕನ್ನಡಿಗರೆಲ್ಲರಿಗೆ ಪರಿಚಿತವಾದ ಹೆಸರು ಪ್ರವಾಸ, ಕಲೆ, ಪರಿಸರ ಪ್ರಜ್ಞೆ, ಪತ್ರ ಸಾಹಿತ್ಯ, ಲಲಿತ ಪ್ರಬಂಧಗಳು ಮುಂತಾದ ಕ್ಷೇತ್ರದಲ್ಲಿ ಸಾಹಿತ್ಯ ಕೃಷಿಯನ್ನು ಮಾಡಿದ ಡಾ.ಕಾಮತ್‌ರವರು ಎರಡು ಲಕ್ಷ ಮೀರಿ ವಿವಿಧ ಜೀವನ ಮುಖಿ ವಸ್ತುಗಳ ಛಾಯಾ ಚಿತ್ರ ತೆಗೆದಿದ್ದಾರೆ.ಅವರಲ್ಲಿ ಸಂಶೋಧನಾ ಪ್ರವೃತಿ ತೀವ್ರವಾಗಿತ್ತು. ಅದರ ಪರಿಣಾಮವಾಗಿ ಪ್ರಸ್ತುತ "ನಾ ಕಂಡ ಕರ್ನಾಟಕ". ಆಗಾಗ್ಗೆ ವಿವಿಧ ಪತ್ರಿಕೆಗಳಲ್ಲಿ ಪ್ರಕಟಿವಾದ ಕರ್ನಾಟಕ ಕುರಿತಾದ ಇಪ್ಪತ್ತು ಪ್ರಬಂಧಗಳಿವೆ. ಈ ಎಲ್ಲ ಲೇಖನಗಳು ಪ್ರಬುದ್ಧ ಮತ್ತು ಪಕ್ವ ವಿಚಾರಗಳಿಂದ ಕೂಡಿದ್ದಾಗಿದೆ ಕರ್ನಾಟಕದ ಎಲ್ಲ ಗ್ರಂಥಾಲಯಗಳು ಹೊಂದಿರಬೇಕಾದ ಪುಸ್ತಕ ಇದು.

* * *


ಪುಸ್ತಕದ ಹೆಸರು : **ನಭ**
ಸಂಪಾದಕರು : ಕೆ.ಟಿ. ಚಂದು
ಪ್ರಕಾಶಕರು : ಎಚ್.ಕೆ.ವೀರಣ್ಣಗೌಡ ಪ್ರಕಾಶನ
ಎಚ್.ಕೆ. ವೀರಣ್ಣಗೌಡ ನಗರ,
ಮದ್ದೂರು-೫೭೧೪೨೮
ಬೆಲೆ ರೂ : ೧೦೦ : ಪುಟಗಳು;೧೪೪ : ಪ್ರಕಟಣಾವರ್ಷ : ೨೦೦೯

ಹಿಂದುಳಿದ ಹಳ್ಳಿಯಿಂದ ಯುನೆಸ್ಕೊವರೆಗೆ ಬೆಳೆದ ಕನ್ನಡಿಗ ಭದ್ರಯ್ಯನವರು. ಅವರ ವಿವಿಧ ಬಗೆಯ ಸಮಾಜಸೇವೆ ಮತ್ತು ಅವರು ಅಳವಡಿಸಿಕೊಂಡಿದ್ದ ಗಾಂಧೀ ವಿಚಾರದ ಅನುಸರಣೆಯನ್ನು ಈ ಗ್ತಂಥದಲ್ಲಿಯ ವಿವಿಧ ಲೇಖನಗಳು ತುಂಬ ಮನೋಜ್ಞವಾಗಿ ಪರಿಚಯಿಸಿಕೊಡುತ್ತದೆ. ಭದ್ರಯ್ಯನಂಥ ವಿಶೇಷ ಸಾಮರ್ಥ್ಯದ ವ್ಯಕ್ತಿ ಕನ್ನಡಿಗರ ಸ್ಮರಣೆಯಲ್ಲಿ ಉಳಿಯುವಂತೆ ಮಾಡಿದೆ ಈ ಪುಸ್ತಕ. ಗಾಂದೀ ಆದರ್ಶವನ್ನು ಪಾಲಿಸಿದ ವ್ಯಕ್ತಿಗಳ ಶೋಧನೆಯಲ್ಲಿರುವ ಹೊಸ ಪೀಳಿಗೆಯ ಯುವಕರಿಗೆ ಈ ಪುಸ್ತಕ ಸಮಯೋಚಿತವಾಗಿ ಹೊರ ಬಂದಿದೆ.

* * *

ಖದ್ದರ್‌ಪ್ರೇಮಿ ಶ್ರೀನಿವಾಸ ಪೈ

- ಡಾ.ಜ್ಯೋತ್ಸ್ನಾ ಕಾಮತ್



ಭಾರತದ ಸ್ವತಂತ್ರ್ಯ ಹೋರಾಟ ಕಾಲಕ್ಕೆ ಮಹಾತ್ಮಾ ಗಾಂಧಿಯುವರ ಬರಹ ಭಾಷಣಗಳಿಂದ ಪ್ರಭಾವಿತರಾಗಿ, ಸ್ವಯಂ ಸ್ಫೂರ್ತಿಯಿಂದ ಅಸಂಖ್ಯ ತರುಣರು ನೌಕರಿ, ಸ್ಕೂಲು, ಕಾಲೇಜು ಬಿಟ್ಟು ಚಳುವಳಿಯಲ್ಲಿ ಧುಮುಕಿದ್ದು ಈಗ ಇತಿಹಾಸ. ಇವರಲ್ಲಿ ರಾಜಕೀಯವಾಗಿ ಮುಂಚೂಣಿಯಲ್ಲಿದ್ದು, ಜೈಲುವಾಸ ಇತರ ಕಷ್ಟನಷ್ಟಕ್ಕೆ ಒಳಗಾದವರು ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ತಾನಾಗಿ ಬಂದ ಅವಕಾಶಗಳ ಲಾಭ ಪಡೆದವರಿದ್ದರೆ, ತಮ್ಮ ಕೊಡುಗೆಯನ್ನು ಹಿಗ್ಗಿಸಿ ಪ್ರಚಾರಗೊಳಿಸಿ ಯಾವತ್ತೂ ಲಾಭ ಮಾಡಿಕೊಂಡ 'ತ್ಯಾಗಿ'ಗಳ ಸಂಖ್ಯೆ ಸಾಕಷ್ಟು ದೊಡ್ಡದಿದೆ! ಆದರೆ ಕೇವಲ ಗಾಂಧೀ ಪ್ರಣಾಳಿಕೆಯ ಪ್ರಚಾರಕ್ಕೆ ಜೀವನವನ್ನೇ ಮುಡುಪಿಟ್ಟು ಯಾವ ಸೌಕರ್ಯ, ಅನುಕೂಲ, ಲಾಭಕ್ಕೆ ಬಳಸದೇ ಮೊದಲಿನಿಂದ ಕೊನೆಯವರೆಗೂ ಏಕಪ್ರಕಾರವಾಗಿ ಬದುಕಿ 'ಇಲ್ಲ'ವಾದ ನಿಜವಾದ ದೇಶಭಕ್ತರೂ ಆಗಿ ಹೋಗಿದ್ದಾರೆ. ಇವರಲ್ಲಿ ಕಾಡಬೆಟ್ಟು (ಖದ್ದರ್) ಶ್ರೀನಿವಾಸ ಪೈ (೧೮೯೨-೧೯೭೬) ಒಬ್ಬರು. ಖಾದಿ ಬಟ್ಟೆಯ ನಿರ್ಮಾಣ, ಪ್ರಚಾರಗಳಲ್ಲಿಯೇ ಮುಖ್ಯವಾಗಿ ತಮ್ಮನ್ನು ತೊಡಗಿಸಿಕೊಂಡ ಕೆ.ಶ್ರೀನಿವಾಸ ಪೈಗಳು ಕಾಂಗ್ರೆಸ್ ಕಾರ್ಯಕರ್ತರಾಗಿದ್ದರು. ಅವರು ಎಂಭತ್ತನಾಲ್ಕು ವರ್ಷಗಳಷ್ಟು ದೀರ್ಘಕಾಲ ಖಾದಿ ಪ್ರೇಮಿಗಳಾಗಿದ್ದರು.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿಯ ಬಳಿಯ ಕಾಡಬೆಟ್ಟು ಗ್ರಾಮದಲ್ಲಿ ೧೮೯೨ರಲ್ಲಿ ಜನಿಸಿದ ಶ್ರೀನಿವಾಸ ಪೈಗಳು ಅನುಕೂಲ ಮನೆತನದಲ್ಲಿ ಬೆಳೆದವರು. ಗಾಂಧೀಜಿಯಿಂದ ಪ್ರಭಾವಿತರಾಗಿ ಕಾಲೇಜು ಶಿಕ್ಷಣವನ್ನು ಅರ್ಧಕ್ಕೇ ಬಿಟ್ಟು ಸ್ವದೇಶಿ ಚಳುವಳಿಯಲ್ಲಿ ಸ್ವಯಂ ಸೇವಕರಾಗಿ ತಮ್ಮನ್ನು ಪೂರ್ಣತಃ ತೊಡಗಿಸಿಕೊಂಡರು. ಖಾದಿಯನ್ನೇ ಧ್ಯೇಯವಾಗಿಸಿಕೊಂಡ ಅವರನ್ನು ಖದ್ದರ್ ಶ್ರೀನಿವಾಸ ಪೈ ಎಂದೇ ಜನ ಗುರುತಿಸಿದರು. 'ಸ್ವಾವಲಂಬನೆಗಾಗಿ ಸೂತ್ರ ಯಜ್ಞ' ಎಂದು ಹಳ್ಳಿಹಳ್ಳಿ, ಮನೆಮನೆ ತಿರುಗಿ ತಕಲಿಯಿಂದ ನೂಲುವಂತೆ ಜನರನ್ನು ಪ್ರೋತ್ಸಾಹಿಸಿದರು. ಹತ್ತಿಕೊಳ್ಳುವುದು, ಜನರಿಗೆ ಪೂರೈಸುವುದು, ತಯಾರಾದ ಲಡಿಗಳನ್ನೆಲ್ಲ ಸಂಗ್ರಹಿಸಿ ನೂಲಲು ನೇಕಾರರಿಗೆ ಒದಗಿಸುವುದು, ತಯಾರಾದ ಬಟ್ಟೆಯನ್ನು ಮಾರಿ ನಿಧಿಯನ್ನು ಕಾಂಗ್ರೆಸ್ ಸಂಸ್ಥೆಗೆ ಒದಗಿಸುವುದು ಅವರ ಕೆಲಸವಾಯಿತು.

೨೫-೨-೧೯೩೪ರಂದು ಉಡುಪಿಯಲ್ಲಿ ಇವರು ಪ್ರಾರಂಭಿಸಿದ ಸ್ವದೇಶಿ ಖಾದಿ ಅಂಗಡಿಯನ್ನು ಸ್ವತಃ ಮಹಾತ್ಮಾ ಗಾಂಧೀಯವರೇ ಉದ್ಘಾಟಿಸಿದರು. ಬಳಿಕ ಮಂಗಳೂರು, ಕಾರ್ಕಳದಲ್ಲಿಯೂ ಅಂಗಡಿಗಳನ್ನು ತೆಗೆದರು. ಕಾಂಗ್ರೆಸ್ ಸಮಿತಿಯ ಸಕ್ರಿಯ ಸದಸ್ಯರಾಗಿದ್ದರಿಂದ ಜಿಲ್ಲೆಯ ಮುಖಂಡರೆಲ್ಲ ಇವರಿಗೆ ಪರಿಚಿತರಾಗಿದ್ದರು. ಗಾಂಧೀಜಿಯಂತೆ, ಸರೋಜಿನಿ ನಾಯ್ಡು, ಕಮಲಾದೇವಿ ಚಟ್ಟೋಪಾಧ್ಯಾಯರಂತಹ ರಾಷ್ಟ್ರಮಟ್ಟದ ನಾಯಕರನ್ನು

ಮನೆಗೆ ಕರೆತಂದು ಸತ್ಕರಿಸಿದ ಸಾಹಸ ಇವರದು.

ನುಡಿದಂತೆ ನಡೆಯುತ್ತಿದ್ದ ಪೈಗಳ ಕುಟುಂಬ, ಮಾದರಿಯದೂ, ಅತ್ಯಪರೂಪವಾದದ್ದೆಂದೂ ಗುರುತಿಸಲೇಬೇಕಾಗುತ್ತದೆ. ತಮಗಿಂತ ತುಂಬ ಹೆಚ್ಚು ವಯಸ್ಸಿನ ಅಂತರವಿದ್ದ (೧೮ ವರ್ಷಕ್ಕೂ ಹೆಚ್ಚು) ಪದ್ಮಾವತಿಯನ್ನು ಬಾಳಸಂಗಾತಿಯಾಗಿ ಪಡೆದು, ಒಂಭತ್ತು ಮಕ್ಕಳಿಗೆ ತಂದೆಯೂ ಆದರು. ಗುರುವೂ ಆದರು. ಮನೆಯಲ್ಲಿ ದಿನವೂ ಸೂತ್ರಯಜ್ಞ, ಆಶ್ರಮ ಭಜನಾವಳಿಗಳು ನಡೆಯುತ್ತಿದ್ದವು. ಮಕ್ಕಳೆಲ್ಲ ನೂತು, ಆ ನೂಲಿನ ಬಟ್ಟೆಯನ್ನೇ ಧರಿಸುವಷ್ಟು ಆತ್ಮನಿರ್ಭರರಾದರು. ಸದಾಕಾಲ ಸಂಘಟನೆ-ತಿರುಗಾಟದಲ್ಲಿರುತ್ತಿದ್ದ ದೊಡ್ಡದಾದ ಪೈ ಕುಟುಂಬವನ್ನು ನಡೆಸಿಕೊಂಡು ಹೋದವರು, ಅತ್ಯಂತ ಸಮರ್ಥರಾಗಿದ್ದ ಪತ್ನಿ ಪದ್ಮಾವತಿ ಮತ್ತು ಹಿರಿಮಗಳು ಭಾರತಿ. ಸಣ್ಣ ಊರಿನಲ್ಲಿ ಹೆಣ್ಣುಮಕ್ಕಳು ನೌಕರಿಗೆ ಹೋಗದ ದಿನಗಳಲ್ಲಿ ಭಾರತಿ ಬ್ಯಾಂಕಿನಲ್ಲಿ ಉದ್ಯೋಗಸ್ಥೆಯಾಗಿ, ಅವಿವಾಹಿತರಾಗಿಯೇ ಉಳಿದು, ಮನೆತನದ ಹೊಣೆ ಹೊತ್ತರು. ಗಂಡು ಮಕ್ಕಳೆಲ್ಲ ಸ್ವಾವಲಂಬಿಗಳಾಗಿದ್ದರಿಂದ ಅಂದಿನ ಮೆಟ್ರಿಕ್ ಪರೀಕ್ಷೆ ಮುಗಿದೊಡನೆ ಮುಂಬೈಗೆ ಹೋಗಿ, ಚಿಕ್ಕಪುಟ್ಟ ವೃತ್ತಿ ಮಾಡುತ್ತ ರಾತ್ರಿ ಶಾಲೆ-ಕಾಲೇಜು ಓದಿ ಉಚ್ಚ ಉದ್ಯೋಗಸ್ಥರಾದರು. ಹೆಣ್ಣು ಮಕ್ಕಳೂ ಗೃಹಿಣಿಯರಾಗಿ, ಸಾಧ್ಯವಿದ್ದಷ್ಟು ಸಾಮಾಜಿಕ ಸೇವೆ ಕೈಗೊಂಡರು. ತನ್ನ ಕಾಲೇಜು ಶಿಕ್ಷಣ ಮುಗಿಯುವ ತನಕ ಖಾದಿ ಧರಿಸಿದ ಪೈಗಳ ಕಿರಿಮಗಳು ಶ್ರೀಮತಿ ಉಷಾ ಪಡಿಯಾರ್ (ಬ್ಯಾಂಕ್ ಅಧಿಕಾರಿಯಾಗಿ ಸ್ವನಿವೃತ್ತಿ ಪಡೆದವರು), ಆಶ್ರಮದಂತೆ ಎಡಬಿಡದ ಚಟುವಟಿಕೆಗಳಿಂದ ತುಂಬಿದ್ದ ತಮ್ಮ ಮನೆಯ ಬಾಲ್ಯದ ದಿನಗಳನ್ನು ನೆನಪಿಸಿಕೊಳ್ಳುತ್ತಾರೆ.

ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ಸಕ್ರಿಯರಾಗಿ ದುಡಿದ ಕಾರ್ಯಕರ್ತರಿಗೆಲ್ಲ ಕಾಂಗ್ರೆಸ್ ಸರ್ಕಾರ ಉಚಿತ ಜಮೀನನ್ನು ಕೊಡಮಾಡಿತು. ಹುದ್ದೆಗಳನ್ನು ನೀಡಿತು. ಖಾದಿ ಪ್ರಚಾರಕ್ಕಾಗಿ ಮನೆ-ಮಾರು ಕಳೆದುಕೊಂಡಿದ್ದರೂ, ಶ್ರೀನಿವಾಸ ಪೈಗಳು ಸರ್ಕಾರದ ಕೊಡುಗೆಯನ್ನು ತಿರಸ್ಕರಿಸಿದರು. ಕಠಿಣ ಜೀವನವನ್ನು ಮುಂದುವರಿಸಿದರು. ಗಾಂಧೀಜಿಯ ಚಿತಾಭಸ್ಮವನ್ನು ೧೨-೨-೧೯೪೮ರಂದು ಉಡುಪಿಗೂ ತಂದು ಸಮುದ್ರಕ್ಕೆ ಸೇರಿಸಲಾಗಿತ್ತು. ಆ ಪವಿತ್ರ ತಾಣದಲ್ಲಿ, ಪೈಗಳು ಚಂದಾ ಒಟ್ಟುಮಾಡಿ ಸ್ಮಾರಕ ಸ್ತಂಭವನ್ನು ನಿರ್ಮಿಸಿದರು. ಮಲ್ಪೆ ಬಳಿಯ ವಡಾಭಾಂಡೇಶ್ವರ ಬೀಚ್‌ನಲ್ಲಿದ್ದ ಈ ಸ್ತಂಭದ ಮೇಲೆ ಗಾಂಧೀಜಿ ಪ್ರಚುರಗೊಳಿಸಿದ ಮೂರು ಕೋತಿಗಳು ಕೆತ್ತಲ್ಪಟ್ಟಿದ್ದವು. ಗಾಂಧೀ ಜಯಂತಿ, ಸ್ವಾತಂತ್ರ್ಯ ದಿನ, ಪ್ರಜಾರಾಜ್ಯೋತ್ಸವ ದಿನಗಳಲ್ಲಿ ಅಲ್ಲಿ ಸೂತ್ರಯಜ್ಞ ಏರ್ಪಡಿಸುತ್ತಿದ್ದರು.

ಮುಂದೆ ಪೈಗಳು, ವಿನೋಬಾರ ಭೂದಾನ ಚಳುವಳಿ ಸೇರಿಕೊಂಡರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿನೋಬಾರೊಂದಿಗೆ ಸಂಚರಿಸಿ ಹಲವರಿಂದ ಭೂಮಿಯನ್ನು ಪಡೆಯಲು ಸಹಾಯವಾದರು. ಸರ್ವೋದಯ ಪಾತ್ರೆ ಹಿಡಿದು ಮನೆ ಮನೆ ತಿರುಗಿ, ಹಣ, ಭತ್ತ ಪಡೆದು ಬಡವರಿಗೆ ಹಂಚಿದ್ದು ಇವರ ವೈಯಕ್ತಿಕ ಕೊಡುಗೆ ಆಗಿತ್ತು.

ಮುಪ್ಪಿನ ಕಾಲದಲ್ಲಿ ತಮ್ಮ ಕರ್ಮಭೂಮಿಯಾಗಿದ್ದ ಉಡುಪಿಯನ್ನು ತೊರೆದು, ಮುಂಬೈಯಲ್ಲಿದ್ದ ಮಕ್ಕಳ ಮನೆಯಲ್ಲಿ ನೆಲೆಸುವ ಸಂದರ್ಭ ಒದಗಿತ್ತು. ಅಲ್ಲಿಯೇ ೧೯೭೭ರಲ್ಲಿ ನಿಧನ ಹೊಂದಿದರು.

ಸರ್ಕಾರದ ಉಚಿತ ಕೊಡುಗೆಗಾಗಿ ಹಪಹಪಿಸದ, ಪ್ರಚಾರ ಬಯಸದ, ತಾವು ನಂಬಿದ ತತ್ವಗಳ ಜೊತೆಗೆ ಯಾವುದೇ ರಾಜಿಮಾಡಿಕೊಳ್ಳದ ಅದೆಷ್ಟೋ ಹಿರಿಯರು ಆಗಿ ಹೋಗಿದ್ದಾರೆ. ಅಂಥವರನ್ನು ಗುರುತಿಸುವುದೂ ಕಷ್ಟಸಾಧ್ಯವಾದಾಗ, ಅವರನ್ನು ಕಂಡ, ಅವರ ಕಾರ್ಯವೈಖರಿಯನ್ನು ಬಲ್ಲ, ಬದುಕುಳಿದ ಕೆಲವರಿಂದಲೇ ಮಾಹಿತಿ ಪಡೆಯಬೇಕಾಗಿ ಬಂದಿದೆ!

* * *

ಧರ್ಮಾಮೃತ

– ವಿನೋಬಾ

ಸರ್ವೋದಯ, ಭೂದಾನ ಚಳುವಳಿಯಲ್ಲಿ ಭಾಗವಹಿಸಿದ ಒಬ್ಬ ಕಾರ್ಯಕರ್ತ ಪ್ರಶ್ನೆ ಕೇಳಿದ್ದಾರೆ– ನಮ್ಮಲ್ಲಿ ಹೆಚ್ಚು ಜನರದು ಹಿಂದೂ ಮನಸ್ಸು, ಹಿಂದೂ ಮೈಂಡ್ ಆಗಿದೆ ಎನ್ನಲಾಗುತ್ತದೆ. ಈ ಆಕ್ಷೇಪದ ಬಗ್ಗೆ ನಿಮ್ಮ ವಿಚಾರವೇನು?

ವಿನೋಬಾ – ಈ ಹಿಂದೂ ಮನ್ನಸ್ಸು ಅಧಿಕಾಂಶ ಜನರದೋ ಕೆಲವರದು ಮಾತ್ರವೋ ಎನ್ನುವ ಬಗ್ಗೆ ಹೇಳುವುದು ನನಗೆ ಕಠಿಣ ಅನಿಸುವುದು. ಆದರೆ ನನ್ನ ಬಗ್ಗೆ ಮೊದಲು ತಿಳಿಸುವೆ. ನನ್ನದು ಅವಶ್ಯ ಹಿಂದೂ ಮನಸ್ಸು. ಆದರೆ ಆ ಹಿಂದೂ ಮನಸ್ಸು ಅಂದರೇನು ಎಂದು ಯಾರಾದರೂ ಕೇಳುವುದಾದರೆ ಅದರ ವ್ಯಾಖ್ಯೆ ನಾನೇನು ಮಾಡುವೆ? ಅದಕ್ಕೆ ನೀವು ಕ್ರಿಶ್ಚಿಯನ್ ಮನಸ್ಸು ಎಂದೂ ಹೇಳಬಹುದು, ಮುಸ್ಲಿಂ ಮನ್ನಸ್ಸು ಎಂದೂ ಹೇಳಬಹುದು. ಏಕೆಂದರೆ ಎಲ್ಲಾ ಧರ್ಮಗಳ ಸಾರ ಹಿಂದೂ ಧರ್ಮ ಎಂದು ನಾನು ತಿಳಿಯುತ್ತೇನೆ. ಇದೇ ಪ್ರಕಾರ ಎಲ್ಲಾ ಧರ್ಮಗಳ ಸಾರ ಜೀಸಸ್ ಕ್ರೈಸ್ಟ್‌ನ ಧರ್ಮ, ಎಲ್ಲಾ ಧರ್ಮಗಳ ಸಾರ ಇಸ್ಲಾಂ ಧರ್ಮ ಎಂದು ನಾನು ತಿಳಿಯುವೆ.

ಇಸ್ಲಾಂ ಧರ್ಮದ ಬಗ್ಗೆ ಜನರಿಗೆ ಬಹಳ ತಪ್ಪು ಕಲ್ಪನೆ ಇದೆ. ಏಕೆಂದರೆ ಮುಸ್ಲಿಂ ಅರಸರ ಕಾಲದಲ್ಲಿ ಹಿಂದೂಸ್ತಾನದಲ್ಲಿ ಬಹಳ ಅತ್ಯಾಚಾರಗಳು ಆದವು. ಈ ಅತ್ಯಾಚಾರಗಳನ್ನು ವೃಥಾ (ವ್ಯರ್ಥವಾಗಿ) ಇಸ್ಲಾಂ ಧರ್ಮದೊಂದಿಗೆ ಜೋಡಿಸಲಾಗುವುದು. ಆದರೆ ಇಸ್ಲಾಂ ಧರ್ಮದಲ್ಲಿ ಅತ್ಯಂತ ಸ್ಪಷ್ಟ ಶಬ್ದಗಳಲ್ಲಿ, ಎಲ್ಲಾ ಶ್ರದ್ಧಾವಂತರ ಸಮೂಹ ಒಂದೇ ಆಗಿದೆ ಎಂದು ಹೇಳಲಾಗಿದೆ. **ಉಮ್ಮತು ಮ್ ವಾಹಿದತ್,** ಎಂದು ಸ್ಪಷ್ಟ ಶಬ್ದಗಳಲ್ಲಿ ತಿಳಿಸಲಾಗಿದೆ. ಜಗತ್ತಿನಲ್ಲಿ ಭಕ್ತಜನರ ಎಷ್ಟು ಸಮೂಹಗಳು ಇರುವುವೋ ಅವೆಲ್ಲಾ ಒಂದೇ 'ಉಮ್ಮತ್' ಅಂದರೆ ಸಮೂಹ ಎಂದು. ಅವುಗಳಲ್ಲಿ ಭೇದ ಭಾವ ಏನು ಮಾಡಲಾಗುವುದೊ ಅದೆಲ್ಲಾ ತಪ್ಪು. ಅಷ್ಟೇ ಅಲ್ಲ, ಧರ್ಮಪ್ರಚಾರದಲ್ಲಿ ಜಬರದಸ್ತಿ, ಬಲಾತ್ಕಾರ ಮಾಡಲೇಬಾರದು– **ಲಾ ಇಕ್‌ರಾಹ್ ಫಿದ್ದೀನ್**. ಧರ್ಮ ವಿಚಾರವನ್ನು ಕೇವಲ ಜನರ ಮುಂದಿಡಬೇಕಷ್ಟೆ. ಧರ್ಮದ ಬಗ್ಗೆ ಇದಕ್ಕಿಂತ ಹೆಚ್ಚು ಬಲಾತ್ಕಾರ ಮಾಡುವುದು ಅನ್ಯಾಯ, ಎಂದು ಪೂರ್ಣ ಸ್ಪಷ್ಟ ಶಬ್ದಗಳಲ್ಲಿ ಇಸ್ಲಾಂ ಧರ್ಮ ತಿಳಿಸಿದೆ. ಇಸ್ಲಾಂ ಅಂದರೆ ಈಶ್ವರ ಶರಣ. ಇಸ್ಲಾಂನ ಇನ್ನೊಂದು ಅರ್ಥ ಶಾಂತಿ. ಈ ಎರಡು ಅರ್ಥದ ಹೊರತು ಮೂರನೆಯ ಅರ್ಥವಿಲ್ಲ. ಇದರ ಅರ್ಥ, ಪರಮೇಶ್ವರ ಒಬ್ಬನೇ ಮತ್ತು ಎಲ್ಲರಲ್ಲಿಯೂ ಪ್ರೇಮಭಾವನೆ ಇಡುವುದು– ಇದು ಇಸ್ಲಾಂ ಧರ್ಮ.

ಬೈಬಲ್‌ನಲ್ಲೂ ಜೀಸಸ್ ಕ್ರೈಸ್ಟ್ ಇದನ್ನೇ ಹೇಳಿರುವನು. ಸೇಂಟ್ ಪಾಲ್‌ನ ಚ್ಯಾರಿಟಿ ಅಧ್ಯಾಯ ಬೈಬಲ್‌ನ ಒಂದು ಉತ್ತಮ ಅಧ್ಯಾಯ. ಅದರಲ್ಲಿ ಹೇಳಲಾಗಿದೆ–**ಪ್ರೀತಿ ಎಲ್ಲರನ್ನೂ ನಂಬುತ್ತದೆ, ಎಲ್ಲರನ್ನೂ ಧರಿಸುತ್ತದೆ, ಎಲ್ಲರನ್ನೂ**

ಸಹಿಸುತ್ತದೆ ಹಾಗೂ ಎಲ್ಲರ ಬಗ್ಗೆಯೂ ಶುಭ ಕೋರುತ್ತದೆ. ಇದಕ್ಕಿಂತ ಹೆಚ್ಚು ಏನು ಹೇಳಲಾದೀತು? ಆದ್ದರಿಂದ ಎಲ್ಲಾ ಧರ್ಮಗಳ ಸಮಾನತೆ ಮತ್ತು ಎಲ್ಲ ಧರ್ಮಗಳ ಸಾರ ಏಕರೂಪ ಆಗಿರುವುದೆಂದು ನನ್ನ ಅಭಿಪ್ರಾಯ. ಆದ್ದರಿಂದ ಹಿಂದು ಉತ್ತಮ ಹಿಂದು ಆಗಬೇಕು, ಮಸಲ್ಮಾನ ಉತ್ತಮ ಮುಸಲ್ಮಾನ ಆಗಬೇಕು, ಕ್ರಿಶ್ಚಿಯನ್ ಉತ್ತಮ ಕ್ರಿಶ್ಚಿಯನ್ ಆಗಬೇಕು, ಬೌದ್ಧ ಉತ್ತಮ ಬೌದ್ಧ ಆಗಬೇಕು, ಇಷ್ಟು ಮಾಡಿದ್ದಾದರೆ ಎಲ್ಲ ಆದಂತೆ.

ಹಿಂದೂ ಮನಸ್ಸು ಜೊತಗೆ ಯಾವುದೇ ಪ್ರಕಾರದ ಅಗೌರವೂ ಕೂಡಿಕೊಂಡಿಲ್ಲ ಎಂದು ನಾನು ಹೇಳಬಯಸುವೆ. ಅಷ್ಟೇ ಅಲ್ಲ ಹಿಂದೂ ಧರ್ಮ ಎಷ್ಟರ ಮಟ್ಟಿಗೆ ಸಮಾವೇಶಕ (ಇನ್‌ಕ್ಲೂಸಿವ್) ಆಗಿರುವುದೋ ಅದನ್ನು ತತ್ವದ ದೃಷ್ಟಿಯಿಂದ ಹೇಳುತ್ತಿರುವೆ, ಆಚರಣೆಯ ದೃಷ್ಟಿಯಿಂದಲ್ಲ. ಅಷ್ಟು ಇನ್ನಾವ ಧರ್ಮವೂ ಇಲ್ಲ ಎಂದು ನಾನು ಹೇಳಬಯಸುವೆ. ಹಿಂದೂ ಧರ್ಮದ ತತ್ವಜ್ಞಾನ ಮತ್ತು ಆಚರಣೆಯಲ್ಲಿ ಅತ್ಯಂತ ಅಂತರ (ವ್ಯತ್ಯಾಸ) ಆಗಿದೆ ಮತ್ತು ಇದೇ ಸ್ಥಿತಿ ಇತರ ಧರ್ಮಗಳದೂ ಕೂಡ. ಆದ್ದರಿಂದ ಆಚರಣೆಯ ಮಾತನ್ನು ನಾನು ಬಿಡುತ್ತಿದ್ದೇನೆ. ಆದರೆ ಹಿಂದೂ ಧರ್ಮದ ತತ್ವಜ್ಞಾನ ಏನಿದೆ, ಅದರ ಹೆಸರು ವೇದಾಂತ! ವೇದಾಂತದ ಅರ್ಥ ಆಗುವುದು– ವೇದಗಳ ಅಂತ– ಮೃತ್ಯು! ಅಂದರೆ ಪಾಂಥಿಕ (ಕನ್‌ವೆನ್‌ಶನಲ್) ವಸ್ತು ಏನಿದೆ ಅದನ್ನು ಮಾನ್ಯ ಮಾಡದಿರುವುದು. ವೇದಾಂತದ ಅರ್ಥ– ಬೈಬಲಾಂತ, ಕುರಾನಾಂತ, ಧಮ್ಮಪದಾಂತ– ಎಂದರೆ ಇವೆಲ್ಲದರ ಅಂತ ಎಂದೂ ಅರ್ಥ ಆಗಿಬಿಡುವುದು! ಇದು ವೇದಾಂತ! ವೇದಾಂತದಲ್ಲಿ ಹಿಂದಿನ ಎಲ್ಲಾ ಕಾಲ್ಪನಿಕ ಪ್ರಕ್ರಿಯೆಗಳೂ ಮುಳುಗಿ ಹೋಗುವುವು ಮತ್ತು ಮಾನವಜಾತಿಯ ಮಹಾನ್ ಆತ್ಮ ಸ್ವರೂಪ ಏನಿರುವುದು, ಆ ಆತ್ಮಸ್ವರೂಪದ ಕಡೆಗೆ ಧ್ಯಾನಾಕರ್ಷಿತ ಮಾಡಲಾಗುವುದು. ಇದು ಹಿಂದೂ ವಿಚಾರ. ಆದ್ದರಿಂದ ಹಿಂದೂ ಧರ್ಮ ಮೊದಲಿಂದಲೂ ಸಮಾವೇಶಕ ಆಗಿದೆ. ಹಿಂದೂಸ್ತಾನದಲ್ಲಿ ಅನೇಕ ಜಾತಿಗಳಿವೆ. ಅವು ಕೂಡ ಮೂಲತಃ ದೂರ–ದೂರ ಪ್ರದೇಶಗಳಿಂದ ಬಂದ ಬುಡಕಟ್ಟುಗಳು, ಜನಾಂಗಗಳು ಆಗಿದ್ದು, 'ನೀವೂ ಜೀವಿಸಿರಿ, ಇತರರನ್ನೂ ಜೀವಿಸಲು ಬಿಡಿ' ಎಂಬ ವಿಚಾರ ನಡೆಯಿತು ಎನ್ನುವ ಮಾತನ್ನು ಪಾಶ್ಚಾತ್ಯ ಜನರೂ ಒಪ್ಪಿಕೊಂಡಿದ್ದಾರೆ. ಈ ಪ್ರಕಾರದಿಂದ ಅನೇಕ ಜಾತಿಗಳ ಹೆಸರಾದವು ಮತ್ತು ಆ ದೃಷ್ಟಿಯಿಂದ ಕೆಲವು ಬಂಧನ–ಮರ್ಯಾದೆ ಅಸ್ತಿತ್ವಕ್ಕೆ ಬಂತು. ಇಂದು ಆ ಬಂಧನಗಳೂ ಸವಕಲು ಆಗಿರುವುದು. ಆದರೆ ಯಾವ ಕಾಲದಲ್ಲಿ ಅವು ಆದವೋ ಆಗ ಪರಸ್ಪರ ಪ್ರೇಮಭಾವದಿಂದ ಇರುವ ಭಾವನೆಯಿಂದಲೇ ಅವು ಆಗಿದ್ದವು. ಹಾಗಿಲ್ಲದಿದ್ದರೆ ಸಂಘರ್ಷ ತಪ್ಪುವಂತಿರಲಿಲ್ಲ. ಈಗ ಆ ಇತಿಹಾಸದ ಚರ್ಚೆ ಇಲ್ಲಿ ಬೇಡ.

(ಮುಂದುವರಿಯುವುದು...)

(ಬ್ರಹ್ಮವಿದ್ಯಾ ಮಂದಿರ, ಪವನಾರದಿಂದ ಹೊರಡುವ 'ಮೈತ್ರಿ' ಹಿಂದಿ ಮಾಸಿಕ ಪತ್ರಿಕೆಯ ನವೆಂಬರ್ ೧೯೭೭ರ ವಿಶೇಷಾಂಕದಿಂದ)

* * *

ಜನಪದ ವ್ಯಕ್ತಿ

ಡಾ. ಎಸ್.ಎಲ್. ತಿಮ್ಮಯ್ಯ

ಡಾ.ಎಸ್.ಎಲ್. ತಿಮ್ಮಯ್ಯನವರು ಬೇರೆಲ್ಲಾ ವೈದ್ಯರಂಥಲ್ಲ. ಇವರಲ್ಲಿ ಬೇರೆ ವೈದ್ಯರುಗಳಿಗಿಂತ ಅದೆಷ್ಟೋ ಭಿನ್ನವಾದ ಗುಣಗಳು ಮತ್ತು ಕ್ರಿಯಾಶೀಲತೆಗಳು ಮನೆಮಾಡಿವೆ. ಆದ್ದರಿಂದಲೇ ರಾಮನಗರದ ಅನೇಕ ಜನರಿಗೆ ಡಾ. ತಿಮ್ಮಯ್ಯನವರು ಸಾಕ್ಷಾತ್ ನಾರಾಯಣನಾಗಿ ಕಂಡಿದ್ದಾರೆ. ಅಲ್ಲದೆ ಗ್ರಾಮದ ಸಾರ್ವಜನಿಕ ಜೀವನದ ನಕ್ಷತ್ರವಾಗಿಯೂ ಬೆಳಗಿದ್ದಾರೆ. ತಮ್ಮ ೮೩ ವರ್ಷಗಳ ವಸಂತಗಳಲ್ಲಿ ೫೨ ವಸಂತಗಳನ್ನು ರಾಮನಗರದ ಜನ ಜೀವನದ ಏರಿಳಿತಗಳಲ್ಲಿ ಸವೆಸಿದ್ದಾರೆ. ಇಂದಿಗೂ ಅವರ ದೈಹಿಕ ಉತ್ಸಾಹ, ಮಾನಸಿಕ ಉತ್ಸಾಹ, ಮತ್ತು ವೈಚಾರಿಕ ಉತ್ಸಾಹಗಳು, ಎಲ್ಲರಿಗೂ ಪ್ರೇರಣೆಯನ್ನು ಕೊಡುವಂಥದ್ದಾಗಿವೆ. ರಾಮನಗರದ ಜನರು ಡಾ॥ ತಿಮ್ಮಯ್ಯನವರ ವಿವಿಧ ಮುಖ ವ್ಯಕ್ತಿತ್ವದಿಂದ ಪ್ರಭಾವಿತರಾಗಿ ಅವರ ಅಭಿಮಾನಿಗಳೆಲ್ಲರೂ ಸೇರಿ ಸೇವಾಭಿನಂದನಾ ಎಂಬ ಗೌರವ ಗ್ರಂಥವನ್ನು ಪ್ರಕಟಿಸಿದ್ದಾರೆ. ಡಾ.ತಿಮ್ಮಯ್ಯನವರು ಗಾಂಧೀ ವಿಚಾರದಲ್ಲಿ ತುಂಬ ನಂಬಿಕೆಯಿಟ್ಟವರು. ಆದ್ದರಿಂದಲೇ ಅವರು ತಮ್ಮ ಮನೆಗೆ 'ಸರ್ವೋದಯ ಮಂದಿರ' ಎಂದು ನಾಮಕರಣ ಮಾಡಿದರು. ಜೊತೆಗೆ ಸಮಾಜಕ್ಕೆ ಒಳ್ಳೆಯ ಮಾರ್ಗದರ್ಶನ ಮಾಡುತ್ತಾ ಬಂದಿದ್ದಾರೆ. ಅವರು ಯಾವಾಗಲೂ ಜನರಿಗೆ ಸನ್ಮಾರ್ಗದಲ್ಲಿ ನಡೆಯಿರಿ, ಸುಳ್ಳು ಹೇಳಬೇಡಿ, ಕಳ್ಳತನ ಮಾಡ ಬೇಡಿ, ಮೋಸ ಮಾಡ ಬೇಡಿ, ಸರಳ ಜೀವನ ಮಾಡಿ, ಹಿಂಸೆ ಮಾಡಬೇಡಿ, ಅತ್ಯಾಚಾರಿಗಳಾಗಬೇಡಿ, ಕುಡಿತ, ಜೂಜು ಅನಾಚಾರ ಇತ್ಯಾದಿಗಳನ್ನು ಬಿಡಿ ಎಂದು ತಮ್ಮ ಬಳಿ ಬರುವ ರೋಗಿಗಳಿಗೆ ಹೇಳುತ್ತಾರೆ.

ಸ್ವತಃ ನಲವತ್ತು ವರ್ಷಗಳಿಂದ ಯೋಗಾಸನ, ಪ್ರಾಣಾಯಾಮ, ಧ್ಯಾನ ಇತ್ಯಾದಿಗಳನ್ನು ಕ್ರಮವಾಗಿ ಮಾಡುತ್ತ ಬಂದಿದ್ದಾರೆ. ತಮ್ಮ ೭೫ನೇ ವರ್ಷಕ್ಕೆ ವಿರಕ್ತರಾಗಿ ಸರ್ವಸಂಗ ಪರಿತ್ಯಾಗ ಮಾಡಿ ಆಧ್ಯಾತ್ಮದಲ್ಲಿ ಉನ್ನತ ಮಟ್ಟವನ್ನು ಮುಟ್ಟಬೇಕೆಂದು ಅವರ ಆಸೆ.

ಇಚ್ಛಾ ಮರಣೆಯಾಗಬೇಕೆಂದು ಅವರ ಇಚ್ಛೆ. ಡಾ.ತಿಮ್ಮಯ್ಯನವರ ಸೇವಾ ಜೀವನದ ಪರಿಚಯವನ್ನು ಮಾಡಿಕೊಳ್ಳಬೇಕೆಂದರೆ ರಾಮನಗರಕ್ಕೆ ಖುದ್ದಾಗಿ ಭೇಟಿ ಕೊಟ್ಟು ಅಲ್ಲಿಯ ಯಾವುದೇ ವರ್ಗದ ಜನರನ್ನು ಮಾತನಾಡಿಸಿದರೆ ಡಾ. ತಿಮ್ಮಯ್ಯನವರ ಸಮಾಜ ಸೇವೆಯ ಪ್ರಖರತೆ ಗೊತ್ತಾಗುತ್ತದೆ. ತಿಮ್ಮಯ್ಯನವರು ರಾಮನಗರದ ಸುಮಾರು ೪೦ಕ್ಕೂ ಹೆಚ್ಚು ವಿವಿಧ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಸಂಘ ಸಂಸ್ಥೆಗಳಲ್ಲಿ ತಮ್ಮನ್ನು ಸಕ್ರಿಯವಾಗಿ ಹಾಗೂ ಜನಪ್ರಿಯ ವೈದ್ಯರಾಗಿ ಎಲ್ಲರೊಂದಿಗೆ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಮತ್ತು ಸಾವಿರಾರು ಜನ ವೈದ್ಯರಲ್ಲಿ ಹೇಗೆ ಭಿನ್ನವಾಗಿದ್ದರೆಂದು ತಿಳಿಯುವುದು. ಡಾ. ತಿಮ್ಮಯ್ಯನವರು ಸಮಾಜದಿಂದ ತಾವು ಪಡೆದ ಋಣವನ್ನು ಬಹು ಸಮರ್ಥವಾಗಿ ತೀರಿಸುತ್ತಾ ನಮ್ಮ ಮಧ್ಯೆ ಇರುವುದು ಸಂತೋಷದ ಸಂಗತಿಯಾಗಿದೆ. – ***ಸು.ಕೌ***

* * *

ಅಣುಯುಗದ ಸಾಹಿತ್ಯ : ನಾವೇಕೆ ಬರೆಯುತ್ತೇವೆ ?

– ಬಾಜಿನ್

(೧೯೮೪ರ ಮೇ ೧೪ರಿಂದ ೧೮ರವರೆಗೂ ೪೭ನೇ ಅಂತರಾಷ್ಟ್ರೀಯ ಪೆನ್ ಕಾಂಗ್ರೆಸ್ ಸಮ್ಮೇಳನ ಟೋಕಿಯೋದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಮೊಟ್ಟಮೊದಲ ಬಾರಿಗೆ ಅಣುಯುಗದ ಸಾಹಿತ್ಯವನ್ನು ಕುರಿತು ಚರ್ಚಿಸಲಾಯಿತು. ಮೇ ೧೫ ರಂದು ಚೀನಾ ಪೆನ್ ಕೇಂದ್ರದ ಅಧ್ಯಕ್ಷ ೮೦ ವರ್ಷ ವಯಸ್ಸಿನ ಬಾಜಿನ್ ಭಾಷಣ ಇದು. ಉತ್ತರ ಕೊರಿಯಾ ಅಣು ಅಸ್ತ್ರ ತಯಾರಿಕೆಯಲ್ಲಿ ತೊಡಗಿರುವ ಸಂದರ್ಭದಲ್ಲಿ ಈ ಲೇಖನ ಪ್ರಸ್ತುತ)

ಅಂತರರಾಷ್ಟ್ರೀಯ 'ಪೆನ್' ತನ್ನ ೪೭ನೆಯ ಅಧಿವೇಶನವನ್ನು ಟೋಕಿಯೋದಲ್ಲಿ ನಡೆಸುತ್ತಿರುವ ಈ ಸಂದರ್ಭದಲ್ಲಿ ನಾನು ಅವರನ್ನು ಅಭಿನಂದಿಸುತ್ತೇನೆ. ಜೊತೆಗೆ ಜಗತ್ತಿನ ನಾನಾ ಮೂಲೆಗಳಿಂದ ಬಂದು ಲೇಖಕರು ಇಲ್ಲಿ ಒಂದೆಡೆ ಕಲೆತು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಅನುವಾಗುವಂತೆ ಹಿತಕರವಾದ ವಾತಾವರಣವನ್ನು ಕಲ್ಪಿಸಿಕೊಟ್ಟಿರುವ ಉದಾತ್ತ ಸ್ವಭಾವದ ಜಪಾನಿನ 'ಪೆನ್'ಸಂಸ್ಥೆಗೂ ನನ್ನ ವಂದನೆಗಳು.

ಜಗತ್ತಿನ ನಾನಾ ಭಾಗಗಳಲ್ಲಿ ನಮ್ಮ ಓದುಗ ವರ್ಗ ನಮ್ಮ ಮೇಲಿಟ್ಟಿರುವ ಅಪಾರವಾದ ನಂಬಿಕೆ-ಆಶಾಭಾವನೆಗಳನ್ನು ನೋಡಿ ನಾನು ಗದ್ಗದಿತನಾಗಿದ್ದೇನೆ. ಈ ಸಮ್ಮೇಳನ ಹಮ್ಮಿಕೊಂಡಿರುವ ಚರ್ಚಾವಿಷಯಕ್ಕನುಗುಣವಾಗಿ 'ಸಾಹಿತಿ ಮತ್ತು ಅಣುಯುಗದ ಸಾಹಿತ್ಯ' ಇವುಗಳ ನಡುವೆ ಇರುವ ಸಂಬಂಧದ ಸ್ವರೂಪ ದ ಬಗ್ಗೆ ನನ್ನ ಅಭಿಪ್ರಾಯಗಳನ್ನು ತಿಳಿಸುವಂತೆ ಕೇಳಲಾಗಿದೆ. ಟೋಕಿಯೋದ ಈ ಸಮ್ಮೇಳನದಲ್ಲಿ ಸಾಹಿತ್ಯ ಚರ್ಚೆಗಾಗಿ ನನ್ನ ಜೊತೆಗಾರರಾದ ಚೀನೀ ಬರಹಗಾರರೂ, ಜಗತ್ತಿನ ವಿವಿಧ ಭಾಗಗಳಂದ ಅನೇಕ ಬರಹಗಾರರೂ ಆಗಮಿಸಿದ್ದಾರೆ. ಅವರ ಜೊತೆ ಇರುವಾಗ, ಅದರಲ್ಲೂ ವಿಶೇಷವಾಗಿ ಜಪಾನೀ ಲೇಖಕ ಗೆಳೆಯರೊಡನೆ ಇರುವಾಗ ನನಗೆ ಇಲ್ಲಿ ೩೯ ವರ್ಷಗಳ ಹಿಂದೆ ನಡೆದ ದುರಂತ ನೆನಪಾಗುತ್ತದೆ. ನಾನು ಈ ಹಿಂದೆ ಹಲವಾರು ಸಲ ಇಲ್ಲಿಗೆ ಬಂದು ಕಂಡು ಕೇಳಿರುವ ವಿಚಾರ ನನ್ನನ್ನು ಗಂಭೀರವಾಗಿ ಯೋಚಿಸುವಂತೆ ಮಾಡಿದೆ.

'ಪೆನ್' ಸಂಸ್ಥೆಯ ವಾರ್ಷಿಕ ಅಧಿವೇಶನವು ಸಾಹಿತ್ಯದ ಮೂಲಕ ಸ್ನೇಹ ಬೆಳೆಸಲು ಪ್ರಯತ್ನಿಸಿದೆ. ನಮ್ಮ ಒಗ್ಗಟ್ಟನ್ನು ಬಲಪಡಿಸಿದೆ, ಸ್ನೇಹವನ್ನು ಗಟ್ಟಿಗೊಳಿಸಿದೆ, ಸ್ನೇಹವೊಂದೇ ನಮ್ಮ ಪ್ರಧಾನ ಗುರಿಯಲ್ಲ. ಬರಹಗಾರರ ಮುಖ್ಯ ಉದ್ದೇಶ ಮಾನವೀಯತೆಯನ್ನು ಶ್ರೀಮಂತಗೊಳಿಸುವುದು ಹಾಗೂ ಓದುಗರ ಮನಸ್ಸನ್ನು ಆರ್ದ್ರಗೊಳಿಸುವಂತಹ ಸಾಹಿತ್ಯ ರೂಪಗಳನ್ನು ಕೊಡುವುದು.

ಜಗತ್ತಿನ ಮೂಲೆ ಮೂಲೆಗಳಿಂದ ಟೋಕಿಯೋಗೆ ಬಂದು ಜಪಾನಿ ಸಮಾಜದಲ್ಲಿ ಸ್ವಲ್ಪಕಾಲವಿದ್ದು ಹೋಗುವ ನಾವು ಜಪಾನೀಯರ ಆವೇಶಪರವಾದ ಭಾವನೆಗಳನ್ನು ಕಡೆಗಣಿಸಬಾರದು.

ಜಗತ್ತಿನಲ್ಲಿ ಅಣುಬಾಂಬಿನ ದಾಳಿಗೆ ತುತ್ತಾಗಿರುವ ಎರಡು ನಗರಗಳೆಂದರೆ ಹಿರೋಶಿಮಾ ಮತ್ತು ನಾಗಾಸಾಕಿ. ಈ ನಗರಗಳಿಗೆ ಎರಡು ಸಲ ಭೇಟಿ ಕೊಡುವ ಅವಕಾಶ ನನಗೊದಗಿತ್ತು. ಇಲ್ಲಿ ವಿಕಿರಣದ ಕಾಯಿಲೆಯಿಂದ ನರಳುತ್ತಿರುವವರು, ಅಂಗವಿಕಲತೆಯಿಂದ ಬಳಲುತ್ತಿರುವವರು ಇದ್ದಾರೆ. ಈಗಲೂ ಕೂಡಾ 'ಸಾಗರ ಬೆಂಕಿ', 'ಕಪ್ಪು ಮಳೆ', 'ಬಿಸಿಮೋಡ' ಇತ್ಯಾದಿಗಳ ಬಗ್ಗೆ ಮಾತನಾಡುವುದನ್ನು ಗಮನಿಸಬಹುದು. ಹಿರೊಶಿಮಾ ಒಂದರಲ್ಲಿಯೇ ದುರಂತಕ್ಕೊಳಗಾದವರ ಸಂಖ್ಯೆ ೫,೦೦,೦೦೦. ಲೆಕ್ಕವಿಲ್ಲದಷ್ಟು ಕತೆಗಳನ್ನು ಈ ಸಂಬಂಧವಾಗಿ ಹೇಳಬಹುದು. ಅವುಗಳಲ್ಲಿ ಒಂದನ್ನು ಹೇಳುತ್ತೇನೆ.

ಹಿರೊಶಿಮಾದ ಮೇಲೆ ದಾಳಿ ನಡೆದ ಹತ್ತು ವರ್ಷಗಳ ನಂತರ ಹನ್ನೆರಡು ವರ್ಷದ ಬಾಲಕಿಯೊಬ್ಬಳಿಗೆ ಕಾಯಿಲೆಯಾಯಿತು. ಹಳೆಯ ನಂಬಿಕೆಯೊಂದರ ಪ್ರಕಾರ ಕಾಯಿಲೆ ವಾಸಿಯಾಗಬೇಕಾದರೆ ಕಾಯಿಲೆಯಾದವನು/ಳು ಕಾಗದದಲ್ಲಿ ಒಂದು ಸಾವಿರ ಕೊಕ್ಕರೆ ಹಕ್ಕಿಗಳನ್ನು ಮಾಡಬೇಕು. ಈ ಬಾಲಕಿ ಹಾಸಿಗೆಯಲ್ಲಿ ಕುಳಿತು ಕಾಗದದಿಂದ ಸಾವಿರ ಹಕ್ಕಿಗಳನ್ನು ಮಾಡಿ ಮುಗಿಸಿ ನಂತರ ಮೂನ್ನೂರು ಹಕ್ಕಿಗಳನ್ನು ಹೆಚ್ಚಾಗಿ ಮಾಡಿದಳು. ಆದರೂ ಕಾಯಿಲೆ ವಾಸಿಯಾಗದೆ ಆಕೆ ಸತ್ತಳು. ಆ ಬಾಲಕಿಯ ಜ್ಞಾಪಕಾರ್ಥವಾಗಿ 'ಸಾವಿರ ಹಕ್ಕಿಗಳ ಸ್ಮಾರಕ'ವನ್ನು ಶಾಂತಿವನದಲ್ಲಿ ನಿರ್ಮಿಸಲಾಗಿದೆ. ಆ ಸಮಯದಲ್ಲಿ ಜಪಾನಿನ ಮೂಲೆ ಮೂಲೆಗಳಿಂದಲೂ ಮಕ್ಕಳು ಕಳುಹಿಸಿದ್ದ ಕಾಗದದ ಹಕ್ಕಿಗಳು ಈಗಲೂ ಅಲ್ಲಿ ತೂಗಾಡುತ್ತಿವೆ. ನಾನು ಆ ಉದ್ಯಾನವನಕ್ಕೆ ಭೇಟಿ ಇತ್ತಾಗ ದಪ್ಪ ನೀಲಿ ಕಾಗದದಲ್ಲಿ ಮಾಡಿದ್ದ ಹಕ್ಕಿಯೊಂದನ್ನು ಅಲ್ಲಿ ನನಗೆ ಕೊಟ್ಟರು. ಅದನ್ನು ನಾನು ಶಾಂಘಾಯ್‌ನಲ್ಲಿ ನನ್ನ ಮನೆಗೆ ತೆಗೆದುಕೊಂಡು ಹೋಗಿದ್ದೆ. ಆಗಿಂದಾಗ್ಗೆ ನನಗೆ ಆ ಮಗು ನನ್ನ ಮುಂದೆ ನಿಂತು ನನ್ನ ಪ್ರಾಣವನ್ನು ಉಳಿಸಿ ಎಂದು ಬೇಡಿಕೊಳ್ಳುತ್ತಿರುವಂತೆ ಅನಿಸುತ್ತದೆ. ಸಾಧ್ಯವಾಗಿದ್ದಿದ್ದರೆ ನನ್ನ ಪ್ರಾಣವನ್ನೇ ಆಕೆಯ ಸಂತೋಷಕ್ಕಾಗಿ ಮುಡಿಪಾಗಿಡುತ್ತಿದ್ದೇನೋ, ಈ ಘಟನೆಯು ಬರಹಗಾರನಿಗೆ ಧೈರ್ಯ ಮತ್ತು ಜವಾಬ್ದಾರಿ ಇರಬೇಕೆಂಬುದನ್ನು ನನಗೆ ಮನವರಿಕೆ ಮಾಡಿಕೊಟ್ಟಿತು.

ಈ ಸಮ್ಮೇಳನದಲ್ಲಿ ಚರ್ಚಿಸಲು ಆರಿಸಿಕೊಂಡಿರುವ 'ಅಣು ಯುಗದ ಸಾಹಿತ್ಯ' ಎಂಬ ವಿಷಯವೇ ಜಗತ್ತಿನ ಎಲ್ಲ ಜನರ ಆಶೋತ್ತರಗಳನ್ನು ಮತ್ತು ಜಗತ್ತಿನ ಸ್ಥಿತಿಗತಿಯನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ. ನಾವೇಕೆ ಬರೆಯುತ್ತೇವೆ? ಇದು ಎಂತಹ ಅದ್ಭುತವಾದ ಪ್ರಶ್ನೆ! ಈ ಪ್ರಶ್ನೆಗೆ ಹಲವಾರು ವರ್ಷಗಳಿಂದಲೂ ಉತ್ತರ ಕಂಡುಕೊಳ್ಳಲು ಪ್ರಯತ್ನಿಸಿ ಸುಲಭವಾದದ್ದಲ್ಲವೆಂದು ಅರಿತುಕೊಂಡಿದ್ದೇನೆ. ನಿಜ ಹೇಳುವುದಾದರೆ ನನ್ನ ಜೀವನವನ್ನೆಲ್ಲಾ ಉತ್ತರ ಹುಡುಕುವುದಕ್ಕೆ ವಿನಿಯೋಗಿಸಿದ್ದೇನೆ.

ಪ್ರತಿಯೊಬ್ಬ ಲೇಖಕನೂ ವಿವಿಧ ದೃಷ್ಟಿಕೋನಗಳಿಂದ ಸತ್ಯದ ಹುಡುಕಾಟ ಮತ್ತು ಜೀವನವನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನವನ್ನು ಸೃಜನಶೀಲ ಪ್ರಕ್ರಿಯೆಯ ಮೂಲಕ ಮಾಡುತ್ತಾನೆ. ನಾವೇಕೆ ಬರೆಯುತ್ತೇವೆ? ಪ್ರತಿ ಪುಸ್ತಕ, ಪ್ರತಿ ಲೇಖನ

ಇದಕ್ಕೆ ಉತ್ತರ ಕೊಡುತ್ತಿರುತ್ತದೆ. ವೈವಿಧ್ಯಮಯವಾದ ಬದುಕಿನ ವಾತಾವರಣವನ್ನು ವೈವಿಧ್ಯಮಯವಾದ ಆಲೋಚನೆಗಳನ್ನು ನಂಬಿಕೆಗಳನ್ನು ಅಭಿಪ್ರಾಯಗಳನ್ನು ಪ್ರಾಮಾಣಿಕರಾದ ಸತ್ಯಶೋಧಕರಾದ ಲೇಖಕರು ತಮ್ಮ ಕೃತಿಗಳಲ್ಲಿ ಅನಾವರಣ ಮಾಡಿರುವುದರಿಂದ ಅವರ ಗ್ರಂಥಗಳು ತಲೆತಲಾಂತರದಿಂದಲೂ ಉಳಿದು ಬಂದಿವೆ. ಪ್ರತಿಯೊಬ್ಬ ಲೇಖಕನಿಗೂ ತನ್ನದೇ ಆದ ವೈಯಕ್ತಿಕ ಸೃಜನಶೀಲ ವ್ಯಕ್ತಿತ್ವವಿದ್ದರೂ ಎಲ್ಲಾ ಲೇಖಕರು ಸಮಾನವಾದದ್ದನ್ನು ಹಂಚಿಕೊಳ್ಳುತ್ತಾರೆ. ನಾವೇಕೆ ಬರೆಯುತ್ತೇವೆಂದರೆ ಹೇಳಲು ವಸ್ತುವಿದೆ, ಅಭಿವ್ಯಕ್ತಿಸಲು ಭಾವನೆಗಳಿವೆ, ಪದಗಳ ಮೂಲಕ ನಮ್ಮ ಭಾವನೆಗಳನ್ನು ಅಭಿವ್ಯಕ್ತಿಸುತ್ತೇವೆ.

೧೯೬೧ರಲ್ಲಿ ನಾನು ಹೆಸರಾಂತ ಜಪಾನೀ ಬರಹಗಾರನನ್ನು ಭೇಟಿ ಮಾಡಿದ್ದೆ, ನಮ್ಮಿಬ್ಬರ ನಡುವೆ ನಡೆದ ಚರ್ಚೆ ಇನ್ನೂ ನೆನಪಿದೆ. ಅವನು ಮೂಲತಃ ರಾಯಭಾರಿ, ವ್ಯವಹಾರ ತಜ್ಞ, ಆದರೆ ಅವನಿಗೆ ಕಾಯಿಲೆಯಾಗಿ ಕೆಲವೇ ದಿನಗಳಲ್ಲಿ ಸಾಯುವನೆಂದು ವೈದ್ಯರಿಂದ ತಿಳಿಯಿತು, ಏನನ್ನೂ ಸಾಧಿಸದೆ ಸಾಯುವುದು ಸರಿಯಲ್ಲವೆಂದೂ ಅರ್ಥಪೂರ್ಣವಾದದ್ದನ್ನು ಜನರಿಗೆ ಕೊಟ್ಟು ಸಾಯಬೇಕೆಂದು ತೀರ್ಮಾನಿಸಿ ತನ್ನ ಜೀವನದಲ್ಲಿ ಕಂಡುಂಡ ಅನುಭವಗಳಿಗೆ ಕಾದಂಬರಿಯ ರೂಪಕೊಡಲು ತೀರ್ಮಾನಿಸಿ ಬರೆಯಲು ಪ್ರಾರಂಭಿಸಿದನು. ವೈದ್ಯರು ಹೇಳಿದ್ದು ಸುಳ್ಳಾಯಿತು. ಆ ವ್ಯಕ್ತಿ ಈಗಲೂ ಬದುಕಿದ್ದು ಬರವಣಿಗೆ ಮುಂದುವರಿಸುತ್ತಿದ್ದಾನೆ. ಅವನ ಬಿಚ್ಚು ಮನಸ್ಸು ಮತ್ತು ಪ್ರಾಮಾಣಿಕತೆಯನ್ನು ನಾನು ಎಂದಿಗೂ ಮರೆಯುವುದಿಲ್ಲ.

ನಾನು ಪ್ಯಾರಿಸ್‌ನಲ್ಲಿ ವಿದ್ಯಾರ್ಥಿಯಾಗಿದ್ದಾಗ ಬರೆಯಲು ಪ್ರಾರಂಭ ಮಾಡಿದೆ. ಚೀನಾ ಮತ್ತು ನನ್ನ ಕುಟುಂಬವನ್ನು ಬಿಟ್ಟು ಪ್ಯಾರಿಸ್‌ನಲ್ಲಿದ್ದುದರಿಂದ ನನ್ನ ಅಂತರಂಗದಲ್ಲಿ ಉಂಟಾಗುತ್ತಿದ್ದ ಜ್ವಲಂತವಾದ ಭಾವನೆಗಳನ್ನು ಶಮನಗೊಳಿಸಲು ಬರೆಯ ತೊಡಗಿದೆ. ಹೋಟೆಲೊಂದರ ಐದನೆಯ ಮಹಡಿಯ ಕೊಠಡಿಯೊಂದರಲ್ಲಿ ಕುಳಿತು ನಟ್ರೆಡೊಮೆ (ಪ್ಯಾರಿಸ್‌ನ ಪ್ರಮುಖ ಕ್ರೈಸ್ತ ಆರಾಧನಾ ಮಂದಿರ) ಯಲ್ಲಿ ಗಂಟೆ ಬಾರಿಸುವವರೆಗೂ ಬರೆಯುತ್ತಿದ್ದೆ. ನನ್ನಲ್ಲಿದ್ದ ಪ್ರೇಮ, ದ್ವೇಷ, ದುಃಖಃ, ಸಂತೋಷ, ನೋವು, ಕರುಣೆ, ದಯೆ, ಧ್ಯೇಯ ಮತ್ತು ಹತಾಶೆಗಳು ಲೇಖನಿಯಿಂದ ಹೊರ ಹೊಮ್ಮುತ್ತಿದ್ದವು. ನನ್ನ ಮೊದಲ ಕಾದಂಬರಿ ಬರೆದು ಮುಗಿಸಿದಾಗ ನನ್ನ ಅಂತರಂಗದ ಜ್ವಾಲೆಗಳ ತೀವ್ರತೆ ಕಡಿಮೆಯಾಗಿ ಉಪಶಮನದ ವಿಶ್ರಾಂತಿಯ ಸಂತೋಷದ ಕ್ಷಣಗಳನ್ನು ಅನುಭವಿಸಿದೆ. ಆ ಕಾದಂಬರಿ ಎಲ್ಲರಿಂದ ಸ್ವೀಕೃತವಾಯಿತು, ಅಲ್ಲಿಂದ ನಾನೊಬ್ಬ ಬರಹಗಾರನಾದೆ. ಸಾಂಸ್ಕೃತಿಕ ಕ್ರಾಂತಿ ನಡೆದ ಸಂದರ್ಭವನ್ನು ಬಿಟ್ಟರೆ ೧೯೨೭ ರಿಂದ ಇಲ್ಲಿಯವರೆಗೂ ಬರೆಯುತ್ತಿದ್ದೇನೆ. ನನ್ನ ಬರವಣಿಗೆಯ ಹಿಂದೆ ಆ ದಿನಗಳಲ್ಲಿ ಒಂದು ಉದ್ದೇಶವಿತ್ತು. ನಾನು ವಾಸಿಸುತ್ತಿರುವ ಸಮಾಜಕ್ಕೆ, ನನ್ನ ತಾಯ್ನಾಡಿನ ಜನ ಸಮುದಾಯಕ್ಕೆ ಏನನ್ನಾದರೂ ಕೊಡಬೇಕೆಂಬ ಆಕಾಂಕ್ಷೆಯಿತ್ತು. ನಾನು ಓದುಗರ ಸಂಬಂಧವನ್ನು ಎಂದಿಗೂ ಕಳೆದುಕೊಳ್ಳದೆ ಅವರ ಧ್ಯೇಯ ಮತ್ತು ಆಶೋತ್ತರಗಳನ್ನು ನನ್ನ ಸ್ಫೂರ್ತಿಯ ಸೆಲೆಗಳನ್ನಾಗಿ ಮಾಡಿಕೊಂಡಿದ್ದೇನೆ. ನಾನು ಪದೇ ಪದೇ ಹೇಳುತ್ತಿರುತ್ತೇನೆ: ನನ್ನ ಕೃತಿಗಳು ಓದುಗರ ಜೀವನಕ್ಕೆ ಕಿಂಚಿತ್ ನೆಮ್ಮದಿಯನ್ನು ಕಷ್ಟಗಳನ್ನು ಎದುರಿಸುವ ಮನೋಭಾವವನ್ನು ಬೆಳೆಸಿದರೆ ನಾನು ಸಂತೃಪ್ತ.

ರಷ್ಯಾದಲ್ಲಿ ತಾಯ್ನಾಡಿಗಾಗಿ ನಡೆದ ಹೋರಾಟದ ಸಂದರ್ಭದಲ್ಲಿ ನಡೆದ ತರುಣ ಹುಡುಗಿಯ ಅದ್ಭುತವಾದ ಕತೆ ನನಗೆ ಇನ್ನೂ ಜ್ಞಾಪಕವಿದೆ. ಲೆನಿನ್‌ಗ್ರಾಡ್ ಅನೇಕ ವಾರಗಳ ಕಾಲ ನಾಜಿಗಳಿಂದ ಸುತ್ತುವರಿದಿತ್ತು. ಪಟ್ಟಣವೆಲ್ಲಾ ನಿರ್ಜನವಾಗಿತ್ತು. ವಿದ್ಯುತ್ತಾಗಲಿ, ದೀಪಗಳಾಗಲಿ ಇರಲಿಲ್ಲ. ಅಂತಹ ಗಾಢವಾದ ಕತ್ತಲಲ್ಲಿ ಕುಳಿತು ಆ ಹುಡುಗಿಯು ತಾನು ಓದಿದ ಪುಸ್ತಕಗಳನ್ನು ನೆನಪಿಸಿಕೊಳ್ಳುತ್ತಿದ್ದಳು. ಅದರಲ್ಲೂ ಟಾಲ್‌ಸ್ಟಾಯ್ ಅವರ 'ಅನ್ನಾಕರೆನಿನಾ'ವನ್ನು ಜ್ಞಾಪಿಸಿಕೊಂಡಳು. ಇಲ್ಲಿ ನಮಗೆ ತಿಳಿಯುವ ವಿಚಾರವೆಂದರೆ ಸಾಹಿತ್ಯವು ನಿಜವಾದ ನೈತಿಕ ಬಲ ಮತ್ತು ನೆರವನ್ನು ಓದುಗನಿಗೆ ಕೊಡುತ್ತದೆಂಬುದು.

ನಾನು ಓದುಗನಾದ್ದರಿಂದ ಬರಹಗಾರನಾಗಲು ಸಾಧ್ಯವಾಯಿತು. ನಾನು ಬಾಲ್ಯದಲ್ಲಿದ್ದಾಗ ಮನಸ್ಸನ್ನು ಪೋಷಿಸುವಂತಹ ಹಲವಾರು ವಿಚಾರಗಳನ್ನು ಪುಸ್ತಕಗಳಿಂದ ಹೀರಿಕೊಂಡೆ. ಸಾಹಿತ್ಯದಲ್ಲಿನ ವಾಸ್ತವಿಕ ಪ್ರತಿಮೆಗಳು ನನ್ನನ್ನು ಚಕಿತಗೊಳಿಸಿ ನನ್ನ ಆಲೋಚನೆಗಳನ್ನು ವಿಸ್ತರಿಸಿದವು. ಕಲೆಯ ಮಾಂತ್ರಿಕ ಗುಣವು ನನ್ನ ಉತ್ಸಾಹವನ್ನು ಬಡಿದೆಬ್ಬಿಸಿತು. ನನ್ನ ಮನಸ್ಸು ಸಾಹಿತ್ಯವನ್ನು ಹೀರಿ ಆಸ್ವಾದಿಸಿತು. ಸಾಮಾನ್ಯ ಮನುಷ್ಯರ ದೈನಂದಿನ ಜೀವನ, ಪ್ರಮಾಣಿಕತೆ ಉನ್ನತ ಆದರ್ಶಗಳು ನನ್ನಲ್ಲಿದ್ದ ಸುಪ್ತ ಪ್ರೀತಿ ಮತ್ತು ದಯೆಯನ್ನು ಉದ್ದೀಪಿಸಿದವು. ಒಳ್ಳೆಯ ಪುಸ್ತಕಗಳು ನನಗೆ ಧೈರ್ಯ ತಂದುಕೊಟ್ಟಿವೆ. ಬದುಕಲು ಆದರ್ಶವನ್ನು ಕೊಟ್ಟಿವೆ. ಪ್ರಾಚೀನ ಲೇಖಕರು ನನ್ನ ಬದುಕಿಗಾಗಿ ಉತ್ಕಟವಾದ ಭಾವನೆಗಳನ್ನು ನನ್ನ ಮೇಲೆ ಸಿಡಿಸಿದರು. ನಾನು ಅದನ್ನು ಬರಹಗಳ ಮೂಲಕ ಇತರರ ಮೇಲೆ ಸಿಡಿಸುತ್ತಿದ್ದೇನೆ. ಪ್ರಾರಂಭದಲ್ಲಿ ನನ್ನ ಲೇಖನಿಯು ಬದುಕಿನಲ್ಲಿರುವ ಕತ್ತಲೆಯ ಭಾಗವನ್ನು ಕೆಡುಕಿನ ವಿಚಾರಗಳನ್ನು ಖಂಡಿಸುತ್ತಿತ್ತು. ನಾನು ಬದುಕಿನಲ್ಲಿ ಅಪಾರವಾದ ನೋವನ್ನು ಅನುಭವಿಸಿರುವೆನಾದರೂ ಬದುಕನ್ನು ಪ್ರೀತಿಸುತ್ತೇನೆ. ಅನ್ವೇಷಣೆ ಮತ್ತು ಋಜುತ್ವ ಮನೋಭಾವವನ್ನು ಉಳಿಸಿಕೊಂಡಿದ್ದೇನೆ. ಬರೆಯುತ್ತಾ ಬರೆಯುತ್ತಾ ನನ್ನ ಶೋಧನೆಗಳಿಂದ ಮನಸ್ಸನ್ನು ಗಟ್ಟಿಮಾಡಿಕೊಂಡಿದ್ದೇನೆ. ಹಿಂದಿನ ಲೇಖಕರ ಶೋಧನೆಯ ದೀಪದ ಬೆಳಕಿನಲ್ಲಿ ನನಗೆ ಒದಗಿದ ಆತಂಕ ಅಡಚಣೆಗಳಿಂದ ಧೃತಿಗೆಡದೆ ಮುಂದೆ ಸಾಗಿದ್ದೇನೆ.

ನಮ್ಮ ಹಿಂದಿನ ಬರಹಗಾರರು ಮೌಲಿಕವಾದ ಸಾಹಿತ್ಯವನ್ನು ಬಿಟ್ಟು ಹೋಗಿದ್ದಾರೆ. ಅವರ ಕೃತಿಗಳು ನಮಗೆ ಪುಷ್ಟಿಯನ್ನು, ಪ್ರೋತ್ಸಾಹವನ್ನು ನೀಡಿ ಪ್ರಾಮಾಣಿಕವಾಗಿ ಬರೆಯುವಂತೆ ಒತ್ತಾಯಿಸುತ್ತಿವೆ. ಅವರು ನಮ್ಮನ್ನು ಹೆಚ್ಚು ಪ್ರಾಮಾಣಿಕರನ್ನಾಗಿ ಮಾಡಿದ್ದಾರೆ. ಅಣು ಯುದ್ಧವನ್ನು ಎದುರಿಸಬೇಕಾಗಿರುವ ನಮಗೆ ಧೈರ್ಯ ಅತ್ಯಗತ್ಯ. ಗಾರ್ಕಿಯ ಒಂದು ಕಾದಂಬರಿಯಲ್ಲಿ ಬರುವ ಉರಿಯುವ ಹೃದಯವನ್ನು ಹೊತ್ತ ನಾಯಕ ಎಲ್ಲರನ್ನೂ ಮುಂದೆ ನಡೆಸಿಕೊಂಡು ಹೋಗುವ ಪ್ರತಿಮೆಯು ಸ್ವತಃ ಗಾರ್ಕಿಯ ಚಿತ್ರವೇ ಆಗಿದೆ. ಏಕೆಂದರೆ ಗಾರ್ಕಿಯು "ಸಾಹಿತ್ಯದ ಉದ್ದೇಶ ಮನುಷ್ಯ ಜನಾಂಗವನ್ನು ಉತ್ತಮಗೊಳಿಸುವುದಾಗಿದೆ" ಎಂದು ಹೇಳಿದರು. ಹಳೆಯ ಲೇಖಕರ ಬಹಳಷ್ಟು ಕೃತಿಗಳಲ್ಲಿ ಮನುಷ್ಯರ ನಡುವೆ ಇರುವ ಪ್ರೀತಿಯನ್ನು ದುಷ್ಟಶಕ್ತಿಯು ನಾಶ ಮಾಡಲು ಸಾಧ್ಯವಿಲ್ಲವೆಂಬ ವಿಚಾರವನ್ನು ವ್ಯಕ್ತಪಡಿಸಲಾಗಿದೆ. ಇಂತಹ ವಿಚಾರವು ಓದುಗರನ್ನು ಏಕತ್ರ ತರುವುದಲ್ಲದೆ ಒಳ್ಳೆಯ ಬದುಕಿಗಾಗಿ

ಹೋರಾಟ ಮಾಡುವಂತಹ ಮನೋಭಾವವನ್ನು ಬೆಳೆಸುತ್ತದೆ. ಈ ಸಂದರ್ಭದಲ್ಲಿ ಟಾಲ್‌ಸ್ಟಾಯ್ ಅವರ ಪ್ರಸಿದ್ಧ ಹೇಳಿಕೆಯೊಂದನ್ನು ಹೇಳಬಯಸುತ್ತೇನೆ "ಮನುಷ್ಯನನ್ನು ಒಟ್ಟುಗೂಡಿಸುವ ಯಾವುದೇ ಉದ್ದೇಶ ಒಳ್ಳೆಯದು ಮತ್ತು ಸುಂದರ. ಇದನ್ನು ವಿರೋಧಿಸುವ ಪ್ರಕ್ರಿಯೆ ಕುರೂಪಿ ಮತ್ತು ಕೆಟ್ಟದ್ದು."

ಅಣು ಯುಗದ ಸಾಹಿತ್ಯವನ್ನು ಚರ್ಚಿಸುವಾಗ ಜಗತ್ತಿನ ಸದ್ಯದ ಸ್ಥಿತಿಯನ್ನು ಮರೆತು ಮುಂದೆ ಸಾಗುವಂತಿಲ್ಲ. ಪಾಶ್ಚಾತ್ಯರು ಹೊಸ ಭೂ ಭಾಗಗಳನ್ನು ಅನ್ವೇಷಿಸಿ ಅಲ್ಲಿಯ ಜನರ ಸಂಸ್ಕೃತಿಯನ್ನು ಹಾಳು ಮಾಡುವುದರ ಮೂಲಕ ಅವರನ್ನು ಸಾಮೂಹಿಕ ಹತ್ಯೆಮಾಡಲಾಗುತ್ತಿದೆ. ಅಣು ಯುಗದ ಎರಡು ಶಕ್ತಿಶಾಲಿ ರಾಷ್ಟ್ರಗಳ ನಡುವಿನ ಮಾತುಕತೆ ಇನ್ನೂ ಫಲಕಾರಿಯಾಗಿಲ್ಲ. ತಲೆಯ ಮೇಲೆ ಕತ್ತಿ ತೂಗಾಡುತ್ತಿರುವಂತೆ ಅಣು ಬಾಂಬ್ ನಮ್ಮ ತಲೆಯ ಮೇಲೆ ತೂಗಾಡುತ್ತಿದೆ. ಇದು ಯಾವತ್ತಾದರೂ ಬಿದ್ದೇಬೀಳುತ್ತದೆ. ಅಸಂಖ್ಯಾತ ನಿರಪರಾಧಿಗಳು ದುರಂತಕ್ಕೊಳಗಾಗುತ್ತಾರೆ. ಹಿರೋಶಿಮಾದ ದುರಂತ ಮತ್ತೊಮ್ಮೆ ಮರುಕಳಿಸಿ ನಾಗರಿಕ ಜಗತ್ತು ಸಂಪೂರ್ಣವಾಗಿ ವಿನಾಶವಾಗುತ್ತದೆ.

ಅಣುಯುಗದ ಸಾಹಿತ್ಯವು 'ದುಃಖಕರ'ವಾದ(pesimistic)ವನ್ನು ಪೋಷಿಸುವುದಿಲ್ಲ. ಜನರಲ್ಲಿರುವ ಶಕ್ತಿ ಸಾಮರ್ಥ್ಯವನ್ನು ಕಡೆಗಣಿಸುವುದಿಲ್ಲ. ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನಗಳು ಮನುಷ್ಯನಿಗೆ ಹಿತಕರವಾಗಿರಬೇಕು. ಹಾಗೆಯೇ ಅಣುಶಕ್ತಿಯು ಮಾನವೀಯತೆಯನ್ನು ಪೋಷಿಸಲು ಸಹಾಯಕವಾಗಬೇಕು. ಶಾಂತಿ ಸೌಹಾರ್ದತೆಯು ಅಶಯಗಳನ್ನೊಳಗೊಂಡಿರುವ ಸಾಹಿತ್ಯ ಕೃತಿಗಳು ಮನುಷ್ಯನನ್ನು ಸಮೃದ್ಧಿ ಮತ್ತು ಸುಖದತ್ತ ಕೊಂಡೊಯ್ಯುತ್ತವೆ. ಇದು ಲೇಖಕರ ಕರ್ತವ್ಯ ಕೂಡಾ ಆಗಿರಬೇಕು. ಅಣು ಯುಗದ ಸಾಹಿತ್ಯವು ಶಾಂತಿ ಸೌಹಾರ್ದತೆಯನ್ನು ಬಿತ್ತುವ ಆಶಯಗಳನ್ನೊಳಗೊಂಡಿದ್ದರೆ ಮನುಷ್ಯನು ಉನ್ನತ ಮಟ್ಟದ ಜೀವನವನ್ನು ಭವ್ಯ ನಾಗರಿಕತೆಯನ್ನು ರೂಪಿಸಿಕೊಳ್ಳಲು ದಾರಿಯಾಗುತ್ತದೆ.

ಒಬ್ಬ ಲೇಖಕ ಲವಲವಿಕೆಯಿಂದ ಕೂಡಿದ ಕವನಗಳನ್ನು ರಚಿಸುತ್ತಿರುತ್ತಾನೆ. ಅದೇ ಸಮಯಕ್ಕೆ ಮನುಷ್ಯನು ಪ್ರತಿ ದಿವಸವೂ ಸಾಧಿಸುವ ಆಶ್ಚರ್ಯಕರ ಸಾಧನೆಗಳು ಬರಹಗಾರನ ಕೃತಿಗಳನ್ನು ಶ್ರೀಮಂತಗೊಳಿಸುತ್ತಿರುತ್ತವೆ. ಈ ಕೃತಿಗಳು ಜನರಲ್ಲಿ ಸ್ಫೂರ್ತಿಯ ಸೆಲೆಯನ್ನುಂಟುಮಾಡುತ್ತವೆ.

ಈ ಕಾಂಗ್ರೆಸ್‌ನಲ್ಲಿ ಮಾನವ ಜನಾಂಗದ ಭವಿಷ್ಯದ ಬಗ್ಗೆ ಸ್ತೋತ್ರ ಭಾಷೆಯಲ್ಲಿ ಮಾತನಾಡಬಹುದು; ಆದರೆ ಸಾಧ್ಯವಿಲ್ಲ, ಏಕೆಂದರೆ ಕಪ್ಪು ಮೋಡಗಳು ನಮ್ಮ ತಲೆಯ ಮೇಲೆ ದಟ್ಟವಾಗಿ ಆವರಿಸುತ್ತಿವೆ. ಯುದ್ಧದ ಭೇರಿಗಳು ನಮ್ಮ ಕಿವಿಯಲ್ಲಿ ಮೊಳಗುತ್ತಿವೆ. ನಾನು ಹಿರೊಶಿಮಾದ ದುರಂತವನ್ನು ಮರೆಯುವುದಕ್ಕೆ ಸಾಧ್ಯವೇ ಇಲ್ಲ.

೧೯೮೦ರ ವಸಂತಕಾಲದಲ್ಲಿ ನಾನು ಹಿರೋಶಿಮಾಕ್ಕೆ ಭೇಟಿಕೊಟ್ಟಾಗ 'ಶಾಂತಿ ಸ್ಮಾರಕ ಮ್ಯೂಸಿಯಂ'ನಲ್ಲಿ ಇಟ್ಟಿರುವ ಅತಿಥಿ ಪುಸ್ತಕದಲ್ಲಿ "ಆಗಸ್ಟ್ ೬, ೧೯೪೫ ರಂದು ಏನು ನಡೆಯಿತೋ ಅದು ಮರುಕಳಿಸಿದಂತೆ ಜಗತ್ತಿನ ಜನ ನೋಡಿಕೊಳ್ಳಬೇಕು" ಎಂಬ ಸಂದೇಶವನ್ನು ಬರೆದು ಹೋಗಿದ್ದೆ. ಹಿರೊಶಿಮಾದ ಬಗ್ಗೆ ಬರೆದಿರುವ ಕೆಟ್ಟ ವರದಿಗಳನ್ನು ದಾಳಿಯ ಸಂದರ್ಭದಲ್ಲಿ ಅನಾಹುತಕ್ಕೊಳಗಾದ ಜನರಿರುವ ಆಸ್ಪತ್ರೆಯ ನಿರ್ದೇಶಕರೊಬ್ಬರ ದಿನಚರಿಯನ್ನು ಗಮನಿಸಿ ವಿಚಿತ್ರವಾದ ಕಲ್ಪನೆಗಳನ್ನು

ಮೂಡಿಸಿಕೊಂಡಿದ್ದೆ. ನಾನೇ ಅಲ್ಲಿಗೆ ಹೋದಾಗ ಮೂವತ್ತೊಂಭತ್ತು ವರ್ಷಗಳ ಹಿಂದೆ ಭಗ್ನವಾದ ನಗರವು ಸುಂದರವಾದ ನಗರವಾಗಿ ಮಾರ್ಪಟ್ಟಿತ್ತು. ಬಾಂಬ್ ಸಿಡಿದು ಹಾಳಾಗಿದ್ದ ಎತ್ತರವಾದ ಜಾಗದಲ್ಲಿ 'ಶಾಂತಿವನ'ವನ್ನು ನಿರ್ಮಿಸಲಾಗಿದೆ. ಸಮುದ್ರದ ಸೌಂದರ್ಯ ಮಂತ್ರಮುಗ್ಧನನ್ನಾಗಿಸಿತು. ಹುಲ್ಲು ಹಾಸುಗಂಬಳಿಯಂತೆ ಬೆಳೆದು ಹರಡಿತ್ತು. ಬೆರ್ರಿ ಹೂಗಳು ಅರಳಿ ನಿಂತಿದ್ದವು. ಪಾರಿವಾಳಗಳು ತಮ್ಮ ಕೊಕ್ಕಿನಿಂದ ತಮ್ಮ ಪುಕ್ಕವನ್ನು ಕುಕ್ಕುತ್ತಿದ್ದವು, ಸಣ್ಣ ಮಕ್ಕಳು ಆಟವಾಡುತ್ತಿದ್ದರು. ಆಧುನಿಕ ಕೈಗಾರಿಕೆಗಳು, ಸ್ವಚ್ಛ ಮತ್ತು ಜನನಿಡವಾದ ಬೀದಿಗಳು.... ಎರಡು ದಿನದ ಕಡಿಮೆ ಅವಧಿಯ ಭೇಟಿಯಲ್ಲಿ ಬಹಳಷ್ಟನ್ನು ನೋಡಿದ–ನಂತರ ಹಿರೋಶಿಮಾದ ಜನರಿಗೆ "ಶಾಂತಿ ಮತ್ತು ಸೃಜನ ಕ್ರಿಯೆಯ ಅತ್ಯಧಿಕ ಶಕ್ತಿಗೆ ಮಹಾನ್ ಜಯವಾಗಿರುವುದನ್ನು ಕಂಡೆ, ಜನರಿಗಿರುವ ಅಜೇಯವಾದ ಶಕ್ತಿಯ ಅರಿವಾಯಿತು. ಅಣುಬಾಂಬ್ ಎಂದಿಗೂ ಜನರನ್ನು ನಾಶಮಾಡಲು ಸಾಧ್ಯವಿಲ್ಲ" ಎಂದು ಹೇಳಿದೆ.

ಅಣುಯುಗದ ಸಾಹಿತ್ಯದ ಬಗ್ಗೆ ಚರ್ಚಿಸಲು ಟೋಕಿಯೋದಲ್ಲಿ ನೆರೆದಿರುವ ಬರಹಗಾರರೆಲ್ಲರೂ ಆಶಿಸುವುದೇನೆಂದರೆ ಯಾವುದೇ ರಾಷ್ಟ್ರವನ್ನು ಅಣು ಬಾಂಬಿನಿಂದ ನಾಶ ಮಾಡಲು ಬಿಡಬಾರದು, ಯುದ್ಧವನ್ನು ಪ್ರಬಲವಾಗಿ ವಿರೋಧಿಸಿ ಶಾಂತಿ ಬೇರೂರುವಂತೆ ಮಾಡಬೇಕು. ಲೇಖಕರು ಎಂದಿಗೂ ಕೀಳರಿಮೆಯನ್ನು ಬೆಳೆಸಿಕೊಳ್ಳಬಾರದು. ಏಕೆಂದರೆ ಅವನಿಗೆ ಅದ್ಭುತವಾದ ಶಕ್ತಿ ಇದೆ. ಅವನು ರಚಿಸುವ ಸಾಹಿತ್ಯವು ಹರಿಯುವ ನೀರು ಗಟ್ಟಿಯಾದ ಬಂಡೆಯನ್ನು ಸವೆಸುವಂತೆ ಓದುಗರ ವ್ಯಕ್ತಿತ್ವವನ್ನು ಸರಿಯಾದ ರೀತಿಯಲ್ಲಿ ರೂಪಿಸುತ್ತದೆ. ಸಾಹಿತ್ಯವು ಸತ್ಯವನ್ನು ಹೇಳುವ ದುಷ್ಟತನವನ್ನು ಬಯಲು ಮಾಡಿ ಕತ್ತಲ ಶಕ್ತಿಗಳನ್ನು ಹೊಡೆದೋಡಿಸುವ ಅಸ್ತ್ರವಾಗಬೇಕು. ಇದರಿಂದಾಗಿ ಜಗತ್ತಿನ ಎಲ್ಲಾ ಲೇಖಕರು ಶಾಂತಿ ಮತ್ತು ನ್ಯಾಯಕ್ಕಾಗಿ ಹೋರಾಡಲು ಒಂದೇ ವೇದಿಕೆಯಲ್ಲಿ ಸಂಘಟಿತರಾಗಬೇಕು. ಜಗತ್ತಿನಲ್ಲಿ ನಡೆಯುವ ಯುದ್ಧಗಳನ್ನು ಮತ್ತು ಅಣು ಸಂಘರ್ಷವನ್ನು ನಿವಾರಿಸಬೇಕು. ಜಗತ್ತು ಅಣ್ವಸ್ತ್ರಗಳಿಂದ ಮುಕ್ತವಾದಾಗ ಅಣುಶಕ್ತಿಯು ಸಂತೋಷ ಮತ್ತು ಮಾನವೀಯತೆಗಳನ್ನು ತಂದುಕೊಡುತ್ತದೆ. ಅಂದು ಹಿರೋಶಿಮಾದ ಜನರು ಕನವರಿಸುತ್ತಿರುವ ಶಾಂತಿಯ ಬಯಕೆ ಎಲ್ಲರಿಗೂ ಮನವರಿಕೆಯಾಗುತ್ತದೆ.

ಈ ಕಾಂಗ್ರೆಸ್‌ನಲ್ಲಿ ಭಾಗವಹಿಸಿದ್ದರಿಂದ ನನ್ನಲ್ಲಿ ನೆಮ್ಮದಿಯ ಮತ್ತು ಸ್ನೇಹದ ಭಾವಗಳು ಉದ್ದೀಪಿಸಿವೆ. ಹಲವಾರು ಹಳೆಯ ಸ್ನೇಹಿತರನ್ನು ಭೇಟಿಯಾದೆ. ಜಪಾನ್ ಮತ್ತು ಚೀನೀಯರ ಒಡನಾಟಗಳ ಚರಿತ್ರೆ ಎರಡು ಸಾವಿರ ವರ್ಷಗಳಷ್ಟು ಹಳೆಯದು. ಭರವಸೆಗಾಗಿ ಒಂದೇ ಭಾಷೆಯನ್ನು ಎರಡೂ ರಾಷ್ಟ್ರಗಳು ಒಂದು ಸಾವಿರ ವರ್ಷಗಳಷ್ಟು ಕಾಲ ಹಂಚಿಕೊಂಡಿದ್ದೇವೆ. ಪ್ರಾಚೀನ ಚೀನಾ ಬರಹಗಾರರು ಜಪಾನ್ ಬರಹಗಾರರ ಮೇಲೆ ಪ್ರಭಾವ ಬೀರಿದ್ದಾರೆ ಹಾಗೂ ಚೀನಾವು ಜಪಾನ್‌ನಿಂದ ಬಹಳಷ್ಟು ಮಹತ್ವದ್ದನ್ನು ಕಲಿತಿದೆ. ಇವರು ಚೀನೀ ಆಧುನಿಕ ಸಾಹಿತ್ಯದ ನಿರ್ಮಾಪಕರು, ಇವರಿಬ್ಬರು ಇಲ್ಲಿಯೇ ಓದಿ ಇಲ್ಲಿಯೇ ಜೀವನ ನಡೆಸಿ ಬಹಳಷ್ಟು ಸ್ನೇಹಿತರ ವಲಯವನ್ನು ಹೊಂದಿರುವವರು. ಇವರಿಬ್ಬರೂ ಸಾಹಿತ್ಯವನ್ನು ಅಸ್ತ್ರವನ್ನಾಗಿಸಿಕೊಂಡು ಅಣು ಸಮರದ ವಿರುದ್ಧ ಹೋರಾಟವನ್ನು ಪ್ರಾರಂಭಿಸಿರುವವರು. ನಾನೂ ಕೂಡಾ ೧೯೩೫ರಲ್ಲಿ ಇಲ್ಲಿಯೇ

ಇದ್ದವನು. ೧೯೬೦ರ ದಶಕದಲ್ಲಿ ಅನೇಕ ಸಲ ಇಲ್ಲಿಗೆ ಬಂದು ಹೋಗುತ್ತಿದ್ದಾಗ ಸ್ನೇಹದ ಭಾವಗಳು ತುಂಬಿ ಬರುತ್ತಿದ್ದವು. ಜಪಾನೀ ಬರಹಗಾರರಲ್ಲಿ ನನಗೆ ಅನೇಕ ಆತ್ಮೀಯ ಸ್ನೇಹಿತರಿದ್ದಾರೆ. ಸಾಹಿತ್ಯವು ನಮ್ಮ ಹೃದಯ ಮತ್ತು ಮನಸ್ಸುಗಳನ್ನು ಬಂಧಿಸಿದೆ. ನಮ್ಮ ಭೇಟಿ, ಸಂಪರ್ಕಗಳು ನಮ್ಮೆಲ್ಲರ ಹೃದಯಗಳನ್ನು ಏಕತ್ರ ತರುತ್ತವೆ. ಸ್ನೇಹದ ಜ್ವಾಲೆಗಳು ಹೊತ್ತುತ್ತವೆ. ಇಂತಹ ಸಂತೋಷದ ವಾತಾವರಣ ನಿರ್ಮಾಣವಾಗಲಿ ಎಂಬ ಬಯಕೆ ಉಂಟಾಗುತ್ತದೆ.

ಪೆನ್ ಕಾಂಗ್ರೆಸ್‌ನಲ್ಲಿ ಭಾಗವಹಿಸುತ್ತಿರುವುದು ಇದು ಎರಡನೆಯ ಸಲ. ೧೯೮೧ರಲ್ಲಿ ಲಿಯೊನ್‌ನಲ್ಲಿ ನಡೆದ ಸಮ್ಮೇಳನದಲ್ಲಿ ಮೊದಲ ಬಾರಿಗೆ ಭಾಗವಹಿಸಿದ್ದೆ. ಅಂತರ ರಾಷ್ಟ್ರೀಯ ಮಾನ್ಯತೆಯನ್ನು ಗಳಿಸಿರುವ ಈ ಪೆನ್ ಸಂಸ್ಥೆಯಲ್ಲಿ ರೊಮ್ಯೆನ್ ರೊಲ್ಯಾಂಡ್, ಗಾರ್ಕಿ ಭಾಗವಹಿಸಿದ್ದಾರೆ. ಈ ಸಂಸ್ಥೆಯು ಬಹಳಷ್ಟು ವರ್ಷಗಳ ಕಾಲ ಪ್ರಗತಿಪರ ಕಾರ್ಯಗಳನ್ನು ಮಾಡಿದೆ. ಎಲ್ಲಾ ಲೇಖಕರು ಒಂದೆಡೆ ಸೇರಿ ಅಂತಾರಾಷ್ಟ್ರೀಯ ಸಾಹಿತ್ಯಕ ವಿನಿಮಯಕ್ಕೆ ಪ್ರಯತ್ನಿಸಬೇಕು. ಇದಕ್ಕಾಗಿ ಪೆನ್ ಸಂಸ್ಥೆ ಜಗತ್ತಿನ ಎಲ್ಲಾ ಲೇಖಕರಿಗೆ ವೇದಿಕೆಯಾಗಬೇಕು. ನಮ್ಮ ಧ್ವನಿಗಳು ಎಲ್ಲ ಕಡೆಗೂ ಹರಡಿ ಅಸಂಖ್ಯಾತ ಜನರ ಹೃದಯಗಳನ್ನು ತಲುಪಬೇಕು ನಮ್ಮೆಲ್ಲರ ಧ್ವನಿ ಶಕ್ತಿಯುತವಾದ ಆಧ್ಯಾತ್ಮಿಕ ಶಕ್ತಿಯಂತೆ ವರ್ತಿಸಬೇಕು. ಸಣ್ಣ ಹನಿಯೊಂದು ಸಮುದ್ರದೊಳಗೆ ಹೋದರೆ ಯಾವುದೇ ಪರಿಣಾಮವುಂಟಾಗುವುದಿಲ್ಲ. ಹಾಗೆಯೇ ಒಬ್ಬ ಲೇಕಖನಿಂದ ಒಂದು ಲೇಖನಿಯಿಂದ ಏನನ್ನೂ ಸಾಧಿಸಲು ಸಾಧ್ಯವಾಗುವುದಿಲ್ಲ. ಎಲ್ಲ ಲೇಖಕರು, ಎಲ್ಲರ ಲೇಖನಿಗಳು ಒಂದುಗೂಡಿದರೆ ಮುಂದಿನ ಜನಾಂಗದ ಭವಿಷ್ಯದ ಬದುಕನ್ನು ಸುಂದರವಾಗಿಸಬಹುದು. ಇದು ಲೇಖಕನ ಜವಾಬ್ದಾರಿ, ಆದರ್ಶ, ಗುರಿ; ನಮ್ಮ ನಿರೀಕ್ಷೆಗಳು ಅಪಾರ. ನಾವು ಮುಂದೆ ಏಷ್ಯಾದ ಉನ್ನತಿಗೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಕಡೆಗೆ ಗಮನ ಕೊಡಬೇಕಾಗಿದೆ. ಏಷ್ಯಾದ ದೇಶಗಳಲ್ಲಿ ಸ್ವಾತಂತ್ರ್ಯ ಮತ್ತು ವಿಮೋಚನೆಯ ಆಶಯಗಳನ್ನೊಳಗೊಂಡ ಮಹತ್ವದ ಲೇಖಕರ ಕೃತಿಗಳು ಕಾಣಿಸಿಕೊಳ್ಳುತ್ತಿವೆ. ಈ ಸಮ್ಮೇಳನದ ನಂತರ ನಮ್ಮ ಕೆಲಸಗಳು ಹೊಸ ದಿಕ್ಕಿನತ್ತ ಮತ್ತು ವಿಸ್ತೃತ ಪ್ರಮಾಣದಲ್ಲಿ ಮುಂದುವರಿಯುತ್ತವೆ ಎಂದು ಆಶಿಸುತ್ತೇನೆ.

ಮುಂದಿನ ಕೆಲಸ ಕಾರ್ಯಗಳ ರೂಪರೇಷೆಯನ್ನು ಚರ್ಚಿಸಿ ಸಿದ್ಧಗೊಳಿಸಲು ನಾವೆಲ್ಲಾ ಇಲ್ಲಿ ಸೇರಿರುವುದು ತುಂಬಾ ಸಂತೋಷಕರ ವಿಷಯ ಅಣ್ವಸ್ತ್ರಗಳಿಂದ ಜಗತ್ತು ಮುಕ್ತವಾಗಿ ಅಣುಶಕ್ತಿಯನ್ನು ಮಾನವ ಜನಾಂಗಕ್ಕೆ ಉಪಯುಕ್ತವಾದ ರೀತಿಯಲ್ಲಿ ಬಳಸಿಕೊಳ್ಳುವುದರ ಮೂಲಕ ಮಾನವೀಯತೆಯನ್ನು ನೆಲೆಗೊಳಿಸುವ ಲೇಖಕರ ಆಶಯ ನೆರವೇರುತ್ತದೆ. ಚೀನಿ ಬರಹಗಾರರು ಜಗತ್ತಿನ ಎಲ್ಲಾ ರಾಷ್ಟ್ರಗಳ ಲೇಖಕರೊಂದಿಗೆ ಬೆರೆತು ಮಾನವೀಯತೆಯನ್ನು ನೆಲೆಗೊಳಿಸುವುದಕ್ಕಾಗಿ ತಮ್ಮ ಕೈಗೂಡಿಸುತ್ತಾರೆ.

ಟೋಕಿಯೋ ಕಾಂಗ್ರೆಸ್ ಯಶಸ್ಸಾಗಲೆಂದು ಹಾರೈಸುತ್ತೇನೆ.

(ಸಾಭಾರ : ಅನಿಕೇತನ; ಅನು: ದಂಡಪ್ಪ)

* * *

ನಗರದಲ್ಲಿ ಜ್ಞಾನಿಗಳಿಲ್ಲ!

– ವಿನೋಬಾ

ಉಪಹ್ವರೇ ಗಿರೀಣಾಂ

ಉಪಹ್ವರೇ ಗಿರೀಣಾಂ ಸಂಗಥೇಚ ನದೀನಾಂ ಧಿಯಾ ವಿಪ್ರೋ ಅಜಾಯತ್(೮:೬:೨)

ಈ ಮಂತ್ರದ ಋಷಿ ವತ್ಸ ಕಣ್ವ, ಛಂದ ಗಾಯತ್ರಿ, ದೇವತೆ ಇಂದ್ರ, ಇಂದ್ರನೆಂದರೆ ಪರಮಾತ್ಮ. ಅವನನ್ನೇ ಇಲ್ಲಿ ವಿಪ್ರ ಅಂದರೆ ಜ್ಞಾನಿಯೆಂದು ಕರೆಯಲಾಗಿದೆ. ಅವನು ಎಲ್ಲಿ ಮತ್ತು ಹೇಗೆ ಪ್ರಕಟಗೊಂಡನೆಂಬ ಮಾತನ್ನು ಈ ಮಂತ್ರದಲ್ಲಿ ಪ್ರಸ್ತಾಪಿಸಲಾಗಿದೆ. ಅಡ್ಡ ತಿಡ್ಡವಾದ ಗುಡ್ಡಗಳಲ್ಲಿ ಮತ್ತು ನದಿಗಳ ಜೊತೆಯಲ್ಲಿ ಚಿಂತನ ಮಾಡಿದ್ದಕ್ಕೆ ವಿಪ್ರನ ಜನನವಾಯಿತು. ಅಂದರೆ ಪರ್ವತಗಳ ಗುಹೆಯಲ್ಲಿ ಮತ್ತು ನದಿಗಳ ಸಂಗಮದಲ್ಲಿ ಜ್ಞಾನ ಪ್ರಾಪ್ತಿಯಾಗುತ್ತದೆ.

ಬ್ರಾಹ್ಮಣರು ಬೆಟ್ಟಗುಡ್ಡಗಳಲ್ಲಿ, ನದಿಯ ದಂಡೆಯ ಮೇಲೆ ಧ್ಯಾನ ಮಾಡುತ್ತಿದ್ದರು. ಇದರ ಭಾವಾರ್ಥವಿಷ್ಟೇ, ಏಕಾಂತದಲ್ಲಿ ಜ್ಞಾನದ ಸಂಪಾದನೆ ಸಾಧ್ಯ. ಒಂದು ಪ್ರಕಾರದ ಏಕಾಂತದಲ್ಲಿ ಜನರು ಉದಾಸೀನವಾಗಿರುತ್ತಾರೆ. ಜೀವನವೆಂದರೇನು, ಹೊರಗೇನುನಡೆಯುತ್ತಿದೆ, ಇತ್ಯಾದಿ ವಿಷಯಗಳ ಬಗ್ಗೆ ಯಾವುದೇ ಸಂಬಂಧವಿರುವುದಿಲ್ಲ. ಎರಡನೇ ಪ್ರಕಾರದ ಏಕಾಂತದಲ್ಲಿ ಇಡೀ ವಿಶ್ವವೇ ಒಗ್ಗೂಡಿರುತ್ತದೆ. ದೊಡ್ಡ ರಾಜರಿಗೆ ತಮ್ಮ ಸಮಸ್ಯೆಗಳಿಗೆ ಉತ್ತರ ದೊರೆಯದಿದ್ದಾಗ ಏಕಾಂತದಲ್ಲಿ ವಾಸ ಮಾಡುವ ಋಷಿಗಳ ಬಳಿ ಹೋಗಿ ಇರುತ್ತಿದ್ದರು. ಅವರು ರಾಜರ ಸಮಸ್ಯೆಯನ್ನು ಬಗೆಹರಿಸುತ್ತಿದ್ದರು.

ಉಪನಿಷತ್ತಿನಲ್ಲಿ ಹೀಗೊಂದು ಕಥೆಯಿದೆ: ರಾಜನೊಬ್ಬ ತನ್ನ ಸಾರಥಿಗೆ, "ಯಾರಾದರೂ ಜ್ಞಾನಿಯನ್ನು ಹುಡುಕಿಕೊಂಡು ಬಾ" ಎಂದು ಹೇಳಿದ. ಸಾರಥಿ ಇಡೀ ನಗರ ಸುತ್ತಾಡಿಕೊಂಡು ಬಂದ. ಎಲ್ಲಿಯೂ ಜ್ಞಾನಿ ಸಿಗಲಿಲ್ಲವೆಂದು ಹೇಳಿದ. ಆಗ ರಾಜ ಸಾರಥಿಯನ್ನು ಋಷಿಗಾಗಿ ಎಲ್ಲಿ ಹುಡುಕಿದೆ ಎಂದು ಕೇಳಿದ. ಋಷಿಗಾಗಿ ಸಾರಥಿ ನಗರದಲ್ಲಿ ಹುಡುಕಿದ್ದ ಎಂದು ರಾಜನಿಗೆ ಗೊತ್ತಾದ ಮೇಲೆ, ಜ್ಞಾನಿಯನ್ನು ಎಲ್ಲಿ ಶೋಧಿಸಬೇಕೋ ಅಲ್ಲಿ ಹುಡುಕು ಎಂದು ಸಾರಥಿಗೆ ಪುನಃ ಹೇಳಿದ. ನಗರದಲ್ಲೆಂದಾದರೂ ಜ್ಞಾನಿಗಳಿರುತ್ತಾರೆಯೇ? ನಂತರ ಸಾರಥಿ ಕಾಡಿಗೆ ಹೋದ. ಅಲ್ಲಿ ಅವನಿಗೆ ಜ್ಞಾನಿ ಸಿಕ್ಕ. ಎಲ್ಲಿ ಜ್ಞಾನದ ಎಲ್ಲ ಬಾಗಿಲುಗಳು ಮುಚ್ಚಿರುತ್ತವೆಯೋ ಅಲ್ಲಿ ಜ್ಞಾನಿ ಹೇಗೆ ತಾನೆ ಹುಟ್ಟಲು ಸಾಧ್ಯ? ಕಪಾಟುಗಳಲ್ಲಿ ಬಂಧಿತವಾದ ಪುಸ್ತಕಗಳಲ್ಲಿ ಜ್ಞಾನ ಇರುತ್ತದೆ ಎಂದು ಬಹಳಷ್ಟು ಜನ ತಿಳಿದಿದ್ದಾರೆ.

ಪುಸ್ತಕಗಳನ್ನು ಕೂಡಿಡುವ ಕಪಾಟು ನಗರಗಳಲ್ಲಿರುತ್ತವೆ. ಪುಸ್ತಕಗಳಲ್ಲಿ ಜ್ಞಾನವೇನೋ ಇದೆ. ಆದರೆ ಅದು ಪರೋಕ್ಷ ಜ್ಞಾನ, ಪ್ರತ್ಯಕ್ಷವಾದುದಲ್ಲ. ಕುದುರೆ ಎಂದು ಅಂದಾಗ ಒಂದು ವಸ್ತು ಮನಸ್ಸಿಗೆ ತೋಚುತ್ತದೆ. ಆದರೆ ಅಲ್ಲಿ ಕುದುರೆ ಇಲ್ಲ. ಅದು ಲಾಯದಲ್ಲಿದೆ. ಲಾಯಕ್ಕೆ ಹೋಗಿ ಕುದುರೆಯೊಂದಿಗೆ ಗೆಳೆತನ ಮಾಡಿಕೊಂಡು ಅದರ ಉಪಯೋಗ ಮಾಡಿದಲ್ಲಿ ಕುದುರೆಯೆಂದರೇನೆಂಬುದು ಗೊತ್ತಾಗುತ್ತದೆ. ಸಾರಾಂಶವಿಷ್ಟೆ, ಯಾರ ಎದುರಿನಲ್ಲಿ ಇಡೀ ಪ್ರಕೃತಿ ತೆರೆದಿದೆಯೋ ವಿಶಾಲವಾದ ನಿಸರ್ಗ-ಹೃದಯ: ಮಾತೃಮ್-ಹೃದಯ ತೆರೆದಿದೆಯೋ ಅಂಥವರಿಗೆ ಕಾವ್ಯ ಹೊಳೆಯುತ್ತದೆ.

(ಮುಂದುವರಿಯುವುದು...)

* * *

ನೇರ ನೋಟ

ರಾಜ್ಯದ ಕಾನೂನು ಕಾಲೇಜುಗಳಲ್ಲಿ ವಾರಕ್ಕೊಂದು ದಿನ ವಿದ್ಯಾರ್ಥಿಗಳು ಖಾದಿ ಧರಿಸಬೇಕೆಂದು ವಿನಂತಿಸಲಾಗಿದೆ. ಈ ಸುದ್ದಿ ಖಾದಿ ಉದ್ಯಮದಲ್ಲಿ ತೊಡಗಿರುವವರಿಗೆ ಸಂತೋಷದಾಯಕವಾಗಿದೆ. ಇಂಥ ಸುವಿಚಾರ, ಸುಬುದ್ಧಿ, ಯೋಗ್ಯಬುದ್ದಿ, ಸಕಾಲಿಕ ಬುದ್ಧಿಯುಳ್ಳ ಕೆಲ ಶೈಕ್ಷಣಿಕ ಸಂಸ್ಥೆಗಳ ಮುಖ್ಯಸ್ಥರಿಗೆ ಅಕಸ್ಮಾತ್ತಾಗಿ ಹೊಳೆದರೂ, ಆ ವಿಚಾರ ಎಲ್ಲ ಶ್ರದ್ಧೆ ಮತ್ತು ಗಂಭೀರತೆಯೊಂದಿಗೆ ಜಾರಿಗೆ ಬಂದಲ್ಲಿ ಗಾಂಧೀಜಿಯವರ ಆತ್ಮ ಎಲ್ಲೇ ಇರಲಿ ಅದಕ್ಕೆ ಕೊಂಚಾದರೂ ಶಾಂತಿ ಸಿಗುವುದರಲ್ಲಿ ಸಂದೇಹವಿಲ್ಲ. ಖಾದಿ ಉದ್ಯಮ ಸರ್ಕಾರ ಮತ್ತು ಸಮಾಜದಿಂದ ಉಪೇಕ್ಷಿತಗೊಂಡಿರುವ ಸಂದರ್ಭದಲ್ಲಿ ಕಾನೂನು ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಜಿ.ಎಸ್.ಪಾಟೀಲರು ಖಾದಿ ಉದ್ಯಮದ ಮೇಲಿನ ತಮ್ಮ ಪ್ರೀತಿ ಮತ್ತು ಅಭಿಮಾನವನ್ನು ತೋರಿರುವುದು ತುಂಬ ಸಕಾಲಿಕವಾಗಿದೆ. ಡಾ.ಪಾಟೀಲರ ಈ ಆಶಯ ನೂರಕ್ಕೆ ನೂರರಷ್ಟು ಕೈಗೂಡಲೆಂಬುದೇ ಖಾದಿ ಮತ್ತು ಗಾಂಧೀ ಪ್ರೇಮಿಗಳ ಪ್ರಾರ್ಥನೆ.

ಖಾದಿ ಒಂದು ಬಟ್ಟೆಯಾಗಿರದೆ ವಿಶಿಷ್ಠ ಜೀವನ ಕ್ರಮವಾಗಿದೆ. ವಿಕೇಂದ್ರೀಕೃತ ಅರ್ಥವ್ಯವಸ್ಥೆಯ, ಶೋಷಣೆರಹಿತ ಮತ್ತು ಪರಿಸರ ಸ್ನೇಹಿ ಸಮಾಜ ನಿರ್ಮಾಣದ ಚಿಂತನದ ಸಂಕೇತವಾಗಿದೆ. ಕಾನೂನು ವಿದ್ಯಾರ್ಥಿಗಳು ಖಾದಿ ಧರಿಸುವುದರ ಮೂಲಕ ಇನ್ನೂ ಹಲವಾರು ಸಾಧನೆಗಳತ್ತ ದಾಪುಗಾಲು ಹಾಕಬಹುದು. ಈಗ ಸಂಕಷ್ಟದಲ್ಲಿರುವ ಖಾದಿ ಉದ್ಯಮಕ್ಕೆ ನವಚೈತನ್ಯ ತಂದು ಕೊಡುವುದು, ವಿದ್ಯಾರ್ಥಿಗಳಲ್ಲಿ ಭಾರತದ ಬಗ್ಗೆ ಗೌರವಮೂಡಿಸುವುದು ಇತ್ಯಾದಿ ಆಶಯಗಳನ್ನು ಡಾ.ಪಾಟೀಲರು ಇಟ್ಟುಕೊಂಡಿದ್ದಾರೆ. ಈ ಆಶಯಗಳ ಜೊತೆಗೆ ಗಾಂಧೀಜಿಯವರು ವಕೀಲಿವೃತ್ತಿಯ ಬಗ್ಗೆ ತಮ್ಮ 'ಹಿಂದ್ ಸ್ವರಾಜ್'ದಲ್ಲಿ ಹೇಳಿರುವ ಆದರ್ಶಾತ್ಮಕ ವಿಚಾರಗಳನ್ನೂ ಕಾನೂನು ವಿದ್ಯಾರ್ಥಿಗಳು ಖಾದಿ ಧರಿಸುವುದುರ ಮೂಲಕ ತಮ್ಮ ವೃತ್ತಿಯಲ್ಲಿ ಅಳವಡಿಸಿಕೊಂಡರೆ ವಾರಕ್ಕೊಂದಾವರ್ತಿಯ ಖಾದಿ ಧರಿಸುವಿಕೆ ನಿಜವಾಗಿ ಒಂದು ದೊಡ್ಡ ಸಾಮಾಜಿಕ ಕ್ರಾಂತಿಯನ್ನೇ ಉಂಟುಮಾಡಬಹುದು.

ಗಾಂಧೀ ವಿಚಾರ

ಅನೇಕ ಕಾರ್ಯಕರ್ತರು ನಿಮ್ಮ ಸೂಚನೆಯನ್ವಯವಾಗಿ ಹಳ್ಳಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಹಳ್ಳಿಗರ ಮೇಲೆ ಅವರ ಪ್ರಭಾವ ಎಷ್ಟು ಬಿದ್ದಿದೆ? ನೀವು ಅವರ ಮಧ್ಯೆ ಇರುವಾಗ ಅವರ ಪ್ರಭಾವವಿದೆ. ಆದರೆ ನೀವು ಹೋದ ಮೇಲೆ ಅವರ ಪ್ರಭಾವ ಈಗಿನಷ್ಟೇ ಇರುವುದೆ ಎಂಬ ಪ್ರಶ್ನೆಗೆ ಗಾಂಧೀಜಿ ಕೊಟ್ಟ ಉತ್ತರ ಹೀಗಿತ್ತು. ತಾನು ಪರಿಶುದ್ಧನು ಮತ್ತು ತನ್ನ ಮಾತಿನ ಅರ್ಥದಂತೆ ತನ್ನ ಕೃತಿ ಇರುವುದಾದರೆ ತನ್ನ ಮರಣದ ನಂತರವೂ ತಾನು ಬದುಕುವುದಾಗಿ ಹೇಳಿದರು. ಖಾಸಗಿ ಜೀವನ ಮತ್ತು ಸಾರ್ವಜನಿಕ ಚರ್ಯೆಗಳ ಮಧ್ಯೆ ಪರಿಪೂರ್ಣ ಹೊಂದಾಣಿಕೆ ಇರಬೇಕೆಂದು ಗಾಂಧಿ ನಂಬಿದ್ದರು. ಅದೇ ರೀತಿ ತಮ್ಮ ಜೊತೆಗಾರರು ಸೇವಾ ಭಾವನೆಯ ಪರಿಶುದ್ಧತೆಯಿಂದ ಪ್ರೇರಿತರಾಗಿದ್ದರೆ ಹಾಗೂ ಅಂತರಂಗದಲ್ಲಿ ಮತ್ತು ಬಹಿರಂಗದಲ್ಲಿ ಅವರು ಶುದ್ಧವಾಗಿದ್ದರೆ ಮತ್ತು ಅವರು ನನ್ನ ಸುತ್ತ ಇರುವ ಪ್ರಭಾವಳಿಯಿಂದ ಪ್ರಭಾವಿತರಾಗದೆ ಹೋಗಿದ್ದರೆ ಅವರು ನಿರಂತರ ಉತ್ಸಾಹದಿಂದ ಕೆಲಸ ಮಾಡುವರು. ಅವರ ಸಾಮೂಹಿಕ ಕೆಲಸ ಕಾಲಗತಿಯೊಂದಿಗೆ ಊರ್ಜಿತ ಹೊಂದುವುದು. ಯಾವುದೇ ಒಳ್ಳೆಯ ಕೆಲಸ ಕಾರ್ಯಕರ್ತನ ಸಾವಿನೊಂದಿಗೆ ಸತ್ತು ಹೋಗುತ್ತದೆ ಎಂಬ ಕುರುಡು ನಂಬಿಕೆಯನ್ನು ನಾನೆಂದೂ ಒಪ್ಪಿಲ್ಲ. ಬದಲಿಗೆ ಎಲ್ಲ ಸತ್ಯ ಮತ್ತು ರಚನಾತ್ಮಕ ಕೆಲಸ ಕಾರ್ಯಕರ್ತನ ಸಾವಿನ ನಂತರವೂ ಉಳಿಯುತ್ತದೆ ಮತ್ತು ಅವನನ್ನು ಅಮರನನ್ನಾಗಿ ಮಾಡುತ್ತವೆ.

ಜನಪದ ಸೇವಾ ಟ್ರಸ್ಟ್ ಸಮಾಚಾರ

ಬೇಸಿಗೆ ರಜೆ ಮುಗಿದ ನಂತರ ಶ್ರೀಕೃಷ್ಣ ಶಿಶುವಿಹಾರ ಜೂನ್ ೧ರಿಂದ ಪ್ರಾರಂಭವಾಯಿತು. ಈ ಶಿಶುವಿಹಾರ ಕಳೆದ ೫೦ ವರ್ಷಗಳಿಂದ ಟ್ರಸ್ಟಿನ ಆಶ್ರಯದಲ್ಲಿ ನಡೆಯುತ್ತಿದೆ. ಜೂನ್ ೧ರಿಂದ ಕರುಣಾಗೃಹವೂ ಪ್ರಾರಂಭವಾಯಿತು.

ಜನಪದ ಸೇವಾ ಟ್ರಸ್ಟ್ ೧೯೮೮ರಲ್ಲಿ ಪ್ರಕಟಿಸಿದ್ದ 'ಒಂದು ಹುಲ್ಲಿನ ಕ್ರಾಂತಿ' ಪುಸ್ತಕವು ಇದುವರೆಗೆ ಆರು ಮುದ್ರಣಗಳನ್ನು ಕಂಡು ಈಗ ೨೦೦೯ರಲ್ಲಿ ಏಳನೇ ಮುದ್ರಣ ಹೊಸ ವಿನ್ಯಾಸದೊಂದಿಗೆ ಪ್ರಕಟಗೊಂಡಿದೆ. ಟ್ರಸ್ಟಿನ ಈ ಪ್ರಕಟಣೆ ಕರ್ನಾಟಕ ರಾಜ್ಯದಲ್ಲಿ ಸಾವಯವ ಕೃಷಿ ಬಗ್ಗೆ ರೈತರಲ್ಲಿ ಜಾಗೃತಿಯನ್ನು ಮೂಡಿಸಿತ್ತು. ಸಾವಯವ ಕೃಷಿಯ ತಂದೆಯೆಂದೇ ಕರೆಯಲ್ಪಡುವ ಮಸನೊಬು ಫುಕುವೊಕಾರನ್ನು ಕನ್ನಡಿಗರಿಗೆ ಪರಿಚಯಿಸಿತ್ತು. ಅಲ್ಲದೆ ಟ್ರಸ್ಟಿನ 'ಹೊಸ ಜೀವನ ದಾರಿ' ಕೇಂದ್ರವು ಒಂದು ಸಾವಯವ ಕೃಷಿ ಕೇಂದ್ರವಾಗಿ ರೂಪುಗೊಂಡಿತು. ರಾಜ್ಯದ ಅನೇಕ ಕೃಷಿಕರು ಈ ಕೇಂದ್ರಕ್ಕೆ ಭೇಟಿ ಕೊಟ್ಟು ಪ್ರೇರಣೆ ಪಡೆದು ತಮ್ಮನ್ನು ಸಹಜ ಕೃಷಿಯಲ್ಲಿ ತೊಡಗಿಸಿಕೊಂಡರು. ಜೂನ್ ೨೦,೨೧ನೇ ತಾರೀಖು ಹೊಸ ಜೀವನ ದಾರಿ ಕೇಂದ್ರದಲ್ಲಿ ಸಾವಯವ ಕೃಷಿಯಲ್ಲಿ ಭತ್ತ ಎಂಬ ವಿಷಯವಾಗಿ ಎರಡು ದಿನಗಳ ಕಾರ್ಯಾಗಾರ ನಡೆಯಿತು. ಇದರಲ್ಲಿ ರಾಜ್ಯದ ವಿವಿಧ ಸ್ಥಳಗಳಿಂದ ೪೦ ಜನ ಸಾವಯವ ಭತ್ತ ಕೃಷಿಕರು ಭಾಗವಹಿಸಿದ್ದರು. ಕಾರ್ಯಾಗಾರದ ಮುಕ್ತಾಯ ಸಮಾರಂಭದಲ್ಲಿ ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯದ ಸಂಶೋಧನಾ ನಿರ್ದೇಶಕರಾದ ಡಾ.ಶಿವಣ್ಣನವರು ಭಾಗವಹಿಸಿದ್ದರು. ಕಾರ್ಯಾಗಾರದ ಆಯೋಜನೆಯಲ್ಲಿ ಬೆಂಗಳೂರಿನ 'ಸಹಜ ಸಮೃದ್ಧ' ಮತ್ತು ಹೈದ್ರಾಬಾದ್‌ನ 'ಸುಸ್ಥಿರ ಕೃಷಿ ಕೇಂದ್ರ' ಸಹಕರಿಸಿದ್ದವು.


ಕರ್ನಾಟಕ ಸ್ಟ್ಯಾಟಿಸ್ಟಿಕ್ಸ್ ಸೊಸೈಟಿಯ ನಿರ್ದೇಶಕರಾದ ಶ್ರೀಮತಿ ರುಕ್ಮಿಣಿ ಕೃಷ್ಣಸ್ವಾಮಿ ಮತ್ತು ಶ್ರೀ ಕೃಷ್ಣಸ್ವಾಮಿ ಟ್ರಸ್ಟಿಗೆ ಭೇಟಿ ಕೊಟ್ಟರು. ಕೈಗೊಳ್ಳಬಹುದಾದ ಕಾರ್ಯಕ್ರಮಗಳ ಬಗ್ಗೆ ಮಾತನಾಡಿದರು. ಟ್ರಸ್ಟಿನ ದೀರ್ಘಕಾಲದ ಅಭಿಮಾನಿ ಎಸ್.ಕೆ.ಅಶ್ವತ್ಥನಾರಾಯಣ ತಮ್ಮ ಬಂಧುಗಳೊಂದಿಗೆ ಭೇಟಿ ಕೊಟ್ಟರು.

೨೦೦೯ ಜೂನ್ ಮಾಹೆಯ ದಾನಿಗಳು

ಶ್ರೀ ಶ್ರೀಕಾಂತ್ ಮತ್ತು ಶ್ರೀಮತಿ ಪ್ರೀತಿ; ಶ್ರೀ ಟಿ.ಜೆ.ವಾಸುದೇವ;
ಶ್ರೀ ಕೃಷ್ಣಗುಪ್ತ; ಶ್ರೀಮತಿ ಎಸ್.ಕೆ.ಜಯಲಕ್ಷ್ಮಿ; ಶ್ರೀ ಬಿ.ಟಿ.ನಂಜುಂಡಸ್ವಾಮಿ;
ಶ್ರೀ ಸಿ.ಪಿ.ಶೇಷಾದ್ರಿ; ಡಾ.ಪ್ರೀತಿಪುರಾಣಿಕ್; ಶ್ರೀಮತಿ ಸುಧಾ ಮೂರ್ಚಿಂಗ್;
ಶ್ರೀಮತಿ ಕಮಲಮ್ಮ- ಬೆಂಗಳೂರು
ಶ್ರೀ ಶ್ರೀನಿವಾಸ್ ಮತ್ತು ಶ್ರೀಮತಿ ಮಧು-ಮೈಸೂರು ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ .. ೬೮

– ಸುರೇಂದ್ರ ಕೌಲಗಿ



ಜಯಪ್ರಕಾಶ ನಾರಾಯಣರ ಸೇವೆಗೆ ಸೇರಿದಾಗ ನನ್ನ ವಯಸ್ಸು ಕೇವಲ ೨೦. ಓದಿದ್ದು ಕೇವಲ ಎಸ್.ಎಸ್.ಎಲ್.ಸಿ. ಹೋದದ್ದು ದೂರದ ಬಿಹಾರ ರಾಜ್ಯಕ್ಕೆ. ಹಿಂದಿ ಭಾಷೆಯ ಜ್ಞಾನವಿಲ್ಲ; ದೇಶದ ಭೌಗೋಳಿಕ ವಿಷಯ ಚೆನ್ನಾಗಿ ಗೊತ್ತಿಲ್ಲ. ಬಿಹಾರಕ್ಕೆ ಹೋಗುವ ಮುನ್ನ ಮೂರು ವರ್ಷ ಮುಂಬೈಯಲ್ಲಿ ಇದ್ದುದರಿಂದ ಬೃಹತ್ ಸಮಾಜದ, ಸಮಾಜದ ವೈವಿಧ್ಯತೆಯ ಮತ್ತು ಕೆಲ ಸಾಮಾಜಿಕ ಸಮಸ್ಯೆಗಳ ಇಣುಕು ನೋಟ ದೊರೆತಿತ್ತು. ಜೊತೆಗೆ ಜೀವನದ ಕಟು ಸಂಗತಿಗಳ ಅನುಭವವೂ ಆಗಿತ್ತು. ಇಂಥ ಪರಿಸ್ಥಿತಿಯಿಂದ ದೇಶದ ಹಿರಿಯ ಮುಖಂಡನ ಸೇವೆಗೆ ಹೋದದ್ದು ಬದುಕಿನ ಒಂದು ಚಮತ್ಕಾರ; ಆ ಸೇವೆಯ ಅವಧಿ ಐದು ವರ್ಷಗಳಷ್ಟು ದೀರ್ಘವಾಗಿ ಉಳಿದದ್ದು ಮತ್ತು ಆ ನಾಯಕರ ಆತ್ಮೀಯ ವಿಶ್ವಾಸಕ್ಕೆ ಪಾತ್ರವಾದದ್ದು ಹಾಗು ಆ ನಾಯಕ ನನ್ನ ಸೇವಾ ಅವಧಿಯ ನಿವೃತ್ತಿಯ ಕಾಲಕ್ಕೆ ನನ್ನ ಆಯ್ಕೆಯ ಸೇವಾ ಕ್ಷೇತ್ರ ಮೇಲುಕೋಟೆಗೆ ಸ್ವತಃ ಆಗಮಿಸಿ ಗ್ರಾಮಸ್ಥರೆಲ್ಲರ ಬೃಹತ್ ಸಮಾಜದ ಮುಂದೆ ಆಶೀರ್ವದಿಸಿದ್ದು ಇನ್ನೊಂದು ದೊಡ್ಡ ಚಮತ್ಕಾರ. ಅವರ ಆಶೀರ್ವಾದದ ಹಸ್ತ ಐವತ್ತು ವರ್ಷಗಳಷ್ಟು ದೀರ್ಘಕಾಲ ಸಾರ್ವಜನಿಕ ಸೇವಾ ಕ್ಷೇತ್ರದಲ್ಲಿ ಕೈಹಿಡಿದು ನಡೆಸಿಕೊಂಡು ಬಂದದ್ದು ಮತ್ತೊಂದು ದೊಡ್ಡ ಚಮತ್ಕಾರ.

ಜಯಪ್ರಕಾಶ ನಾರಾಯಣರ ಆತ್ಮೀಯ ವಲಯಕ್ಕೆ ಸೇರಿಕೊಂಡಾಗ ಅವರೊಬ್ಬ ದೊಡ್ಡ ಸಮಾಜವಾದಿಯಾಗಿ ವಿಶ್ವವಿಖ್ಯಾತರಾಗಿದ್ದರು. ದೇಶದ ಶೋಷಿತ ಜನರ ಕಣ್ಮಣಿಯಾಗಿದ್ದರು. ಸಮಾಜವಾದಿ ಪಕ್ಷದ ಜನಕನಾಗಿ ಏಕಮೇವಾದ್ವಿತೀಯ ಪಕ್ಷವಾಗಿದ್ದ ಕಾಂಗ್ರೆಸ್‌ಗೆ ಪರ್ಯಾಯ ಪಕ್ಷ ಕಟ್ಟಿದ ನಾಯಕರಾಗಿದ್ದರು. ಕಮ್ಯುನಿಸ್ಟರಿಗೆ ಹಿತವೆನಿಸದ ಜನಪ್ರಿಯ ಸಮಾಜವಾದಿ ಮುಖಂಡರಾಗಿದ್ದರು; ಎಲ್ಲ ಕ್ಷೇತ್ರಗಳಲ್ಲಿಯ ಕಾರ್ಮಿಕ ವರ್ಗದವರಿಗೆ ನೆಚ್ಚಿನ ನಾಯಕರಾಗಿದ್ದರು. ಅಮೇರಿಕಾಕ್ಕೆ ಹೋಗಿ ಐದಾರು ಪಿ.ಎಚ್.ಡಿ ಪದವಿಗಳನ್ನು ಪಡೆದ ಧೀಮಂತರಾಗಿದ್ದರು. ಗಾಂಧೀಜಿಯವರ ಪ್ರಭಾವ ವಲಯಕ್ಕೆ ಎಲ್ಲ ಮುಖಂಡರು ಒಳಗಾಗುತ್ತಿದ್ದ ಕಾಲಕ್ಕೆ ಆ ವಲಯದಿಂದ ದೂರವುಳಿದು ತಮ್ಮದೇ ವಿಶಿಷ್ಟ ವ್ಯಕ್ತಿತ್ವವನ್ನು ಬೆಳಿಸಿಕೊಂಡಿದ್ದ ನೇತಾರರಾಗಿದ್ದರು. ಮೇರು ಸದೃಶವುಳ್ಳ ಇಂಥ ವ್ಯಕ್ತಿತ್ವದ ರಾಜಕೀಯ ವರ್ಚಸ್ಸಿನ ನಾಯಕನ ಬಳಿ ಅತ್ಯಂತ ಸಾಮಾನ್ಯನಾದ ನನ್ನಂಥ ಚಿಗುರುಮೀಸೆಯ ಯುವಕನೊಬ್ಬ ಹೋಗಿ ಸೇವೆ ಮಾಡಲು ಪ್ರಾರಂಭಿಸಿದ ದಿನದಿಂದ ಐದು ವರ್ಷದ ಆ ಸೇವೆಯ ಕೊನೆಯ ದಿನದ ವರೆಗಿನ ಅನುಭವವೆಲ್ಲವೂ ಹೊಸದು, ರೋಚಕ, ರೋಮಾಂಚಕ ಮತ್ತು ಶೈಕ್ಷಣಿಕ.

ಗರ್ಭದಲ್ಲಿ ಮಗುವೊಂದು ಅದರ ಅರಿವಿಲ್ಲದೆಯೇ ಪೂರ್ಣವಾಗಿ ಬೆಳೆಯುವಂತೆ ನನ್ನ ವ್ಯಕ್ತಿತ್ವ ಜಯಪ್ರಕಾಶ ನಾರಾಯಣರ ವ್ಯಕ್ತಿತ್ವದ ದಟ್ಟ ನೆರಳಿನಲ್ಲಿ ಬೆಳೆಯುತ್ತಿತ್ತು. ಅವರ ಹಾಗೂ ಅವರ ಪತ್ನಿ ಪ್ರಭಾವತಿಯವರಲ್ಲಿ ಬಾಗಲಕೋಟೆಯಲ್ಲಿ ವಾಸಿಸುತ್ತಿದ್ದ ನನ್ನ ತಂದೆ ತಾಯಿಯ ಪ್ರೇಮವನ್ನು ಮತ್ತು ಅಂತಃಕರುಣವನ್ನು ದೂರದ ಹಾಗೂ ಅಪರಿಚಿತ ಪ್ರದೇಶದಲ್ಲಿ ಅನುಭವಿಸುತ್ತಿದ್ದೆ. ಜಯಪ್ರಕಾಶರ ಬಳಿ ಐದುವರ್ಷಗಳ ಕಾಲ ಇದ್ದ ಅವಧಿಯಲ್ಲಿ ನನ್ನ ತಂದೆ ಎಂದೂ ಚಿಂತಿತರಾಗಿ ನನಗೆ ಕಾಗದ ಬರೆದ ನೆನಪಿಲ್ಲ. ನನ್ನ ತಂದೆಯವರಿಗೆ ಜಯಪ್ರಕಾಶ ನಾರಾಯಣರ ವ್ಯಕ್ತಿತ್ವ ಮತ್ತು ದೇಶದ ಸಾರ್ವಜನಿಕ ಜೀವನದಲ್ಲಿ ಹೊಂದಿದ್ದ ಅವರ ಸ್ಥಾನಮಾನದ ಪರಿಚಯವಿದ್ದುದು ಇದಕ್ಕೆ ಕಾರಣ. ಒಮ್ಮೆ ಅವರೊಂದಿಗೆ ಪ್ರವಾಸದ ಅಂಗವಾಗಿ ಮಿರಜ್-ಸಾಂಗ್ಲಿಯ ಮೂಲಕ ಮುಂಬೈಗೆ ಹೋಗುವಾಗ ನನ್ನ ತಂದೆಯವರು ಸ್ಟೇಷನ್‌ಗೆ ಬಂದು ಜಯಪ್ರಕಾಶ ನಾರಾಯಣರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ನನ್ನ ಸೇವೆಯ ಪ್ರಸ್ತಾಪ ಬಂದಿತ್ತು. ಆ ಬಗ್ಗೆ ಅಭ್ಯಂತರವೇನಾದರೂ ಇದೆಯೇ ಎಂದು ಜಯಪ್ರಕಾಶರು ಕೇಳಿದಾಗ ತಂದೆಯವರು ತಮ್ಮ ಸೇವೆಯಲ್ಲಿಯ ಅನುಭವಕ್ಕಿಂತ ಹಿರಿದಾದ ಬೇರೊಂದು ವಿಷಯ ಯಾವುದಿದೆ ಎಂದು ನಗುತ್ತ ಹೇಳಿದರು. ಇದು ನಿಜವೂ ಕೂಡ. ಇನ್ನೂ ಮಾಗದ ಹಸಿರು ಕಾಯಿಯಂತಿದ್ದ ನನ್ನಿಂದ ಎಷ್ಟು ಸಾಧ್ಯವೋ, ಯಾವ ಪ್ರಮಾಣದಲ್ಲಿ ಸಾಧ್ಯವೋ ಅಷ್ಟೊಂದು ಬಗೆಯಲ್ಲಿ ಸೇವೆ ಪಡೆದು ತೃಪ್ತರಾಗುತ್ತಿದ್ದರು ಜಯಪ್ರಕಾಶ ನಾರಾಯಣರು. ಅವರೊಂದಿಗೆ ಕಳೆದು ಹೋದ ಕಾಲವನ್ನು ಜ್ಞಾಪಿಸಿಕೊಂಡಾಗ ಹೊಳೆಯುವುದೇನೆಂದರೆ ಮೇರು ವ್ಯಕ್ತಿಯ ಸೇವೆಗೆ ನನಗೆ ಅರ್ಹತೆಯನ್ನು ತಂದುಕೊಟ್ಟಿದ್ದು ನನ್ನ ಸಾಮರ್ಥ್ಯಕ್ಕಿಂತ ಜಯಪ್ರಕಾಶರಲ್ಲಿದ್ದ ದೊಡ್ಡ ಗುಣ ಕಾರಣವೆಂಬುದು. ಸಮಾಜದಲ್ಲಿ ದೊಡ್ಡವರೆಂದು ಆಗಿಹೋದವರಲ್ಲಿ ಈ ಗುಣವೇ ಅವರನ್ನು ದೊಡ್ಡವರನ್ನಾಗಿ ಮಾಡಿದೆ ಮತ್ತು ಅಸಮರ್ಥರನ್ನು ಸಮರ್ಥರನ್ನಾಗಿ ಮಾಡಿ ಸಮಾಜ ಜೀವನಚಕ್ರ ಉರುಳುವಂತೆ ಆಗಲು ಕಾರಣವಾಗಿದೆ.

(ಮುಂದುವರಿಯುವುದು...)

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾ ಸ್ಮರಿಸುತ್ತದೆ.

ಪ್ರೋ. ಹೆಚ್.ವಿ.ಮಂಜುನಾಥ–ಬೆಂಗಳೂರು
ಶ್ರೀ ಶಂಕರಪ್ಪ–ಮೈಸೂರು
ಈ ಬಂಧುಗಳು ತಮ್ಮ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ
ಶ್ರೀ ಶಂಕರ ರಾಮಚಂದ್ರನ್–ಬೆಂಗಳೂರು
ಶ್ರೀ ವಿಜಯದೇವನ್–ಪಟ್ಟಸೋಮನಹಳ್ಳಿ
ಶ್ರೀ ಎಸ್.ಆರ್.ಜಗದೀಶ್–ವಿರಾಜಪೇಟೆ
ಶ್ರೀ ಶಂಕರಗೌಡ್ರ ಚಂ. ಗಂಗನಗೌಡ್ರ–ರಾಣಿಬೆನ್ನೂರು
ಇವರಿಗೆ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ
(–ಸಂಪಾದಕರು)

ತೆರೆದ–ಅಂಚೆ



KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ... ಶ್ರೀ. ಕಲ್ಪನಾ. M.R
#713, 19ನೇ ಕ್ರಾಸ್
22ನೇ ಮೇನ್, 2ನೇ ಸೆಕ್ಟರ್
H.S.R. ಲೇಔಟ್
ಬೆಂಗಳೂರು. 560102
P. 97311.1336

No Such Person

JANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist-Mandya – 571431.DTP Sanketh, Melkote. Printed at Sanketh, Mudrana, Melkote. Phone : 08236 – 299998 e-mail : janapada@yahoo.com web : janapada.net